ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

EMAIL : dairyadadaari@gmail.com ಸಂಪುಟ: 01 ಸಂಚಿಕೆ: 146

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಭಾನುವಾರ: 17–05–2026

## ಇಂಧನ ಮಿತ ಬಳಕೆಗೆ ಪ್ರಧಾನಿ ನೀಡಿದ ಕರೆಗೆ ದೇಶಾದ್ಯಂತ ಸ್ಪಂದನೆ

**ನವದೆಹಲಿ,ಮೇ16–** ಪಶ್ಚಿಮ ಏಷ್ಯಾದ ಬಿಕ್ಕಟ್ಟು ಮತ್ತು ಜಾಗತಿಕ ತೈಲ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಇಂಧನ ಬಳಕೆಯನ್ನು ಮಿತವಾಗಿ ಬಳಕೆ ಮಾಡಬೇಕೆಂಬ ಪ್ರಧಾನಿ ನರೇಂದ್ರಮೋದಿ ಕರೆಗೆ ದೇಶದಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಪ್ರಧಾನಿಯವರು ಕಳೆದ ಭಾನುವಾರ ಕರೆಕೊಟ್ಟ ನಂತರ ಬಿಜೆಪಿ ಹಾಗೂ ಬಿಜೆಪಿಯೇತರ ಆಡಳಿತ ವಿರುವ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರು, ಸಂಸದರು ಜೊತೆಗೆ ಹೈಕೋರ್ಟ್ ನ್ಯಾಯಮೂರ್ತಿಗಳು, ಜನಸಾಮಾನ್ಯರು, ಕಾರ್ಪೋರೇಟ್ ಸಂಸ್ಥೆಗಳು, ಸರ್ಕಾರಿ ಹಾಗೂ ಖಾಸಗಿ ನೌಕರರು ಸೇರಿದಂತೆ ಮತ್ತಿತರರು ತಮ ಸ್ವಂತ ವಾಹನಗಳನ್ನು ಬಿಟ್ಟು ಸಾರ್ವಜನಿಕ ವಾಹನಗಳ ಬಳಕೆಗೆ ಆದ್ಯತೆ ನೀಡುತ್ತಿದ್ದಾರೆ.

ವಿದೇಶಿ ಅವಲಂಬನೆ ತಗ್ಗಿಸಲು ಮತ್ತು ಆರ್ಥಿಕತೆಯನ್ನು ಬಲಪಡಿಸಲು ಮೋದಿಯವರ ಕರೆಗೆ ಅನೇಕರು ಸ್ಪಂದಿಸಿ ತೈಲ ಉಳಿತಾಯಕ್ಕೆ ಆದ್ಯತೆ ಕೊಟ್ಟಿದ್ದಾರೆ. ಸ್ವತಃ ಪ್ರಧಾನಿಯವರೇ ತಮ ಬೆಂಗಾವಲು ವಾಹನಗಳನ್ನು ಗಣನೀಯವಾಗಿ ಇಳಿಕೆ ಮಾಡಿ ಸದ್ಯ ಎರಡು ವಾಹನಗಳನ್ನು ಬಳಸುತ್ತಿದ್ದಾರೆ. ಇದೇ ಕೇಂದ್ರ ಗೃಹಸಚಿವ ಅಮಿತ್ ಷಾ ಕೂಡ ಪ್ರಧಾನಿಗಳ ದಾರಿಯನ್ನೆ ಹಿಡಿದಿದ್ದು, ಬೆಂಗಾವಲು ಪಡೆಯ ವಾಹನಗಳನ್ನು ಇಳಿಕೆ ಮಾಡಿದ್ದಾರೆ.

ಕೇಂದ್ರದ ಬಹುತೇಕ ಸಚಿವರು ತಮ ಬೆಂಗಾವಲು ವಾಹನಗಳನ್ನು



ಕಡಿತ ಮಾಡಿದ್ದು, ಎರಡು ವಾಹನಗಳು ಮತ್ತು ಅಗತ್ಯವಿರುವ ಕಡೆ ಸಮೂಹ ಸಾರಿಗೆಯನ್ನು ಬಳಸುತ್ತಿದ್ದಾರೆ. ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಲ್ಹೋಟ್, ಸಿಐಎಸ್‌ಎಫ್ ಭದ್ರತೆಯನ್ನು ಬದಿಗಿರಿಸಿ ಬೆಂಗಾವಲು ಪಡೆಯ ವಾಹನಗಳನ್ನು ಶುಕ್ರವಾರದಿಂದಲೇ ಕಡಿತ ಮಾಡಿದ್ದಾರೆ.

ಮಹಾರಾಷ್ಟ್ರದ ದೇವೇಂದ್ರ ಫಡ್ನವೀಸ್, ಗೋವಾದ ಪ್ರಮೋದ್ ಸಾವಂತ್, ಉತ್ತರಖಂಡದ ಪುಷ್ಕರ್ ಧಾಮಿ ಸೇರಿದಂತೆ ಸಚಿವರು, ಶಾಸಕರು ಮತ್ತಿತರರು ಇಂಧನ ಉಳಿತಾಯಕ್ಕೆ ಬೆಂಗಾವಲು ಪಡೆಯ ವಾಹನಗಳನ್ನು ಕಡಿಮೆ ಮಾಡಿದ್ದಾರೆ.

ಜಮು ಮತ್ತು ಕಾಶ್ಮೀರದ ವಿಶ್ವವಿದ್ಯಾಲಯದಂತಹ ಶಿಕ್ಷಣ ಸಂಸ್ಥೆಗಳು, ಖಾಸಗಿ ಕಂಪನಿಗಳು ತಮ ಅಧಿಕೃತ ವಾಹನಗಳನ್ನು ಬಿಟ್ಟು ಹೈಬ್ರಿಡ್ ಕೆಲಸದ ವಿಧಾನಗಳನ್ನು ಅಳವಡಿಸಿಕೊಂಡು ಪ್ರಧಾನಿ ಕರೆಗೆ ಸ್ಪಂದಿಸಿರುವುದು ಉತ್ತಮ ಬೆಳವಣಿಗೆಯಾಗಿದೆ.

ಕರ್ನಾಟಕದಲ್ಲೂ ಪ್ರಧಾನಿ ಮೋದಿ ಅವರ ಕರೆಗೆ ಓಗೊಟ್ಟು ಕೇಂದ್ರ ಸಚಿವರು, ವಿಧಾನಮಂಡಲದ ಉಭಯಸದನಗಳ ಪ್ರತಿಪಕ್ಷದ ನಾಯಕರು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಹಲವರು ವಾಹನಗಳನ್ನು ಕಡಿಮೆ ಮಾಡಿ ಸಮೂಹ ಸಾರಿಗೆಗೆ ಒತ್ತು ಕೊಟ್ಟಿದ್ದಾರೆ.

ಪ್ರಧಾನಿಯವರ ಕರೆಗೆ ಸುಪ್ರಿಂಕೋರ್ಟ್ ಕೂಡ ಸ್ಪಂದಿಸಿದ್ದು, ಇನ್ನು ಮುಂದೆ ವಾರದಲ್ಲಿ ಮೂರು ದಿನ ನ್ಯಾಯಾಲಯಗಳಲ್ಲಿ ಹಾಗೂ ಉಳಿದ ಮೂರು ದಿನದಲ್ಲಿ ವರ್ಚ್ಯುವಲ್ ಮೂಲಕ ಕಲಾಪ ನಡೆಸಲು ತೀರ್ಮಾನಿಸಿದೆ.

ಇತ್ತಿಚೆಗೆ ನ್ಯಾಯಾಧೀಶರೊಬ್ಬರು ತಮ ವಾಹನಗಳನ್ನು ಬಿಟ್ಟು ಸೈಕಲ್ ಏರಿ ನ್ಯಾಯಾಲಯಕ್ಕೆ ಆಗಮಿಸಿ ದೇಶದ ಗಮನ ಸೆಳೆದಿದ್ದರು. ಎರಡು ದಿನಗಳ ಹಿಂದೆ ಮಹಾರಾಷ್ಟ್ರ ಸಿಎಂ ಫಡ್ನವೀಸ್ ಕೂಡ ದ್ವಿಚಕ್ರ ವಾಹನದಲ್ಲಿ ಸಚಿವಾಲಯಕ್ಕೆ ಆಗಮಿಸಿದ್ದರು.

ಮೆಟ್ರೊ ನಗರಗಳಲ್ಲಿ ಸಾರ್ವಜನಿಕ ಸಾರಿಗೆಗೆ ಆದ್ಯತೆ ನೀಡುವುದು, ಕಾರು ಪೂಲಿಂಗ್ ಮತ್ತು ಎಲೆಕ್ಟ್ರಿಕ್ ವಾಹನಗಳನ್ನು ಬಳಸುವಂತೆ ಪ್ರಧಾನಿ ಸಲಹೆ ನೀಡಿದ್ದರು. ಇಂಧನ ಉಳಿತಾಯಕ್ಕಾಗಿ ಕೋವಿಡ್–19 ಮಾದರಿಯಲ್ಲಿ ವರ್ಕ್ 2ನೇಪುಟಕ್ಕೆ

## ಉಪ ನಿರ್ದೇಶಕರಾಗಿ ಶರಣಮ್ಮ ಅಧಿಕಾರ ಸ್ವೀಕಾರ

ಧೈರ್ಯದ ದಾರಿ



**ರಾಯಚೂರು ಮೇ.16:** ರಾಯಚೂರಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನೂತನ ಉಪ ನಿರ್ದೇಶಕರಾಗಿ (ಡಿಡಿ) ಶರಣಮ್ಮ ಅವರು ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ಗಮಿತ ಉಪ ನಿರ್ದೇಶಕರಾದ ನವೀನ್ ಕುಮಾರ್ ಅವರು ಅಧಿಕಾರ ಹಸ್ತಾಂತರಿಸಿದರು.

ಈ ವೇಳೆ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರು ನೂತನ ಉಪ ನಿರ್ದೇಶಕರಿಗೆ ಶುಭ ಕೋರಿದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626

## ಶ್ರೀ ಏಕಲವ್ಯ ದೊಡ್ಡಾಟ ಸಂಘ ತಡಕಲ್ ವತಿಯಿಂದ ವಚನ ವೈಭವ ಕಾರ್ಯಕ್ರಮ



ಧೈರ್ಯದ ದಾರಿ

**ಮಾನ್ವಿ;** ತಾಲೂಕಿನ ಉಟಕನೂರು ಗ್ರಾಮದ ಶ್ರೀ ಅಡವಿಸಿದ್ದೇಶ್ವರ ಮಠದ ಆವರಣದಲ್ಲಿ ಶ್ರೀ ಏಕಲವ್ಯ ದೊಡ್ಡಾಟ ಸಂಘ ತಡಕಲ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರ ಗಿರಿಜನ ಉಪಯೋಜನೆ ಅಡಿಯಲ್ಲಿ ಅಯೋಜಿಸಲಾದ ವಚನ ವೈಭವ ಕಾರ್ಯಕ್ರಮವನ್ನು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ರಂಗಪ್ಪ ಮಾಸ್ತರ್ ತಡಕಲ್ ಮಾತನಾಡಿ ಗ್ರಾಮೀಣ ಭಾಗದ ಜನಪದ ಕಲಾವಿದರ ಶ್ರಮ, ಪ್ರತಿಭೆಗಳಿಗೆ ಸರಕಾರ ಬೆಂಬಲ ನೀಡಿದಾಗ ಮಾತ್ರ ಜನಪದ ಕಲೆಗಳು ಉಳಿಯುವುದಕ್ಕೆ ಸಾಧ್ಯ , ಜನಪದ ಕಲಾ ಪ್ರಕಾರಗಳು ಮನರಂಜನೆಯ ಜೋತೆಗೆ ಜನರಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ಕಾರ್ಯವನ್ನು ಮಾಡುತ್ತವೆ. 12 ನೇ ಶತಮಾನದಲ್ಲಿನ ಬಸವಾದಿ ಶರಣರ ವಿಚಾರಧಾರೆಗಳನ್ನು ವಚನ ಸಾಹಿತ್ಯದ ಮೂಲಕ ನಮ್ಮಗೆ ಕಟ್ಟಿಕೊಟ್ಟಿದ್ದಾರೆ ವಚನಗಳು ಕೇವಲ ಅಕ್ಷರಗಳಲ್ಲ, ಅವುಗಳು ನಮ್ಮ ಬದುಕಿಗೆ ದಾರಿದೀಪಗಳಾಗಿವೆ. ವಚನಗಳನ್ನು ಜನಪದ ಸಾಂಸ್ಕೃತಿಕ ಕಲೆಗಳ ಮೂಲಕ ಜನಸಾಮಾನ್ಯರಿಗೆ ತಲುಪಿಸುವುದಕ್ಕೆ ವಚನ ವೈಭವ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಬಸವಣ್ಣ, ಅಕ್ಕಮಹಾದೇವಿ, ಸರ್ವಜ್ಞ ಹಾಗೂ ಅಲ್ಲಮಪ್ರಭುಗಳ ಆಯ್ದ ವಚನಗಳನ್ನು ಗವಾಯಿ ಹನುಮಂತ್ರಾಯ ಚಿಕ್ಕಕೊಟ್ನೆಕಲ್ ಹಾಡಿದರು, ನಿಜಗುಣ ಭೋಗಾವತಿ ತಬಲಸಾಥ್ ನೀಡಿದರು, ತಡಕಲ್‌ನ ಶ್ರೀ ಏಕಲವ್ಯ ದೊಡ್ಡಾಟ ಸಂಘ ಹಾಗೂ ಸ್ಥಳೀಯ ಕಲಾವಿದರು ವಚನ ಸಾಹಿತ್ಯ ಮತ್ತು ಜಾನಪದ ಕಲೆಗಳನ್ನು ಪ್ರದರ್ಶಿಸಿದರು, ರಾಮಲಿಂಗೇಶ್ವರ ಭಜನಾ ಸಂಘದಿಂದ ತತ್ವಪದ ಗಾಯನ, ಹಾಗೂ ವಚನ ಗಾಯನ, ಸಿಂಧನೂರಿನ ವೀರಗಾಸೆ ಕಲಾ ತಂಡದ ಬಸವರಾಜ ವೀರಗಾಸೆ ಕಲೆಯನ್ನು ಪ್ರದರ್ಶಿಸಿದರು. ರಮೇಶ್ ಹಸಮಕಲ್ ಚಿಲಿಪಿಲಿಗೊಂಬೆ ತಂಡದಿಂದ ಗೊಂಬೆ ಕಲೆ ಪ್ರದರ್ಶನ, ಸಿದ್ದಪ್ಪ ತಡಕಲ್ ತಂಡದಿಂದ ಹಲಗೀಮೇಳ, ಅಯ್ಯಪ್ಪ ಮಲ್ಲದಗುಡ್ಡ ತಂಡದಿಂದ ಡ್ರಮ್ಸ್ ಸೆಟ್ ಪ್ರದರ್ಶನ ಸೇರಿದಂತೆ

ಕಾರ್ಯಕ್ರಮದಲ್ಲಿ ಮುದುಕಯ್ಯ ತಾತ ಉಟಕನೂರು, ರಂಗಯ್ಯ ತಾತ ಬುದ್ದಿನ್ನಿ, ಕಲ್ಯಾಣ ಕರ್ನಾಟಕ ಕಲಾವಿದರ ಸಂಘದ ಜಿಲ್ಲಾ ಸಂಚಾಲಕರಾದ ಶರಣಪ್ಪ ನಾಯಕ ತಡಕಲ್ , ಭೀಮಣ್ಣ ಮಾಸ್ತರ್ ಉದ್ಬಾಳ್, ದುರುಗಪ್ಪ ಉಪನ್ಯಾಸಕರು ತಡಕಲ್, ಗುರುಪ್ರತಾಪ್ ಗೌಡ ದದ್ದಲ್ ,ಡಾ. ಬಸವರಾಜಪ್ಪ ಪೋತ್ನಾಳ, ಶಿವರಾಜಪ್ಪ ಧಣಿ ಜೀನೂರ್, ಭೀಮಣ್ಣ ಮಾಸ್ಟರ್ ಉದ್ಬಾಳ್,ಮುದುಕಪ್ಪ ಮರಡ್ಡಿ ತಡಕಲ್, ಅಮರೇಶ್ ಹಸಮಕಲ್, ಅಮರೇಶ್ ಪೂಜಾರಿ ವಲ್ಕಮ್ ದಿನ್ನಿ, ಯಂಕೋಬ ಮಾಸ್ತರ್ ಗೋನವರ, ಶಾಂತಮ್ಮ ಹಸಮಕಲ್, ಯಲ್ಲಮ್ಮ ಜಿನ್ನಾಪುರ, ಯಂಕನಗೌಡ ಪೇಟಿ ಗೌಡ ದಿದ್ದಿಗಿ, ಸಿದ್ದಪ್ಪ ಪೂಜಾರಿ ಉಟಕನೂರು, ಪ್ರಾಣೇಶ್ ಪೂಜಾರಿ, ಅಮರೇಶ್ ಹೆಬ್ಬಾಳ ಉಟಕನೂರು, ಯಂಕಪ್ಪ ಉಟಕನೂರು, ಶರಣೆಗೌಡ ಮರಕಮದಿನ್ನಿ, ಶರಣಪ್ಪ ದೇವರಮನಿ ಮರಕಮದಿನ್ನಿ, ಬಸಣ್ಣ ಬನ್ನಿಗನೂರು, ಸೇರಿದಂತೆ ಗ್ರಾಮಸ್ಥರು ಇದ್ದರು.

## ವಿದ್ಯಾರ್ಥಿಗಳು ಉನ್ನತ ಗುರಿಯನ್ನು ಹೊಂದುವುದು ಮುಖ್ಯ: ಫಾ.ವಿನೋದ್ ಪೌಲ್

ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಲೊಯೋಲ ಕಾಲೇಜಿನಲ್ಲಿ ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ ಇಂಟರ್ನ್ಶಿಪ್ ಕಾರ್ಯಕ್ಷೇತ್ರದ ಅಂಗವಾಗಿ ಆಯೋಜಿಸಲಾದ ಪೋಸ್ಟರ್ ಪ್ರಸ್ತುತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಲೊಯೋಲ ಕಾಲೇಜಿನ ಪ್ರಾಚಾರ್ಯರಾದ ಫಾ.ವಿನೋದ್ ಪೌಲ್ ಮಾತನಾಡಿ ವಿದ್ಯಾರ್ಥಿಗಳು ತಾವು ಅಯ್ಕೆ ಮಾಡಿಕೊಂಡ ಕಾರ್ಯಕ್ಷೇತ್ರದಲ್ಲಿ ಒಂದು ವಿಷಯವನ್ನು ಪರಿಣಾಮಕಾರಿಯಾಗಿ ಹಾಗೂ ವೈಜ್ಞಾನಿಕವಾಗಿ ವಿಶ್ಲೇಷಿಸಿ ಪ್ರಸ್ತುತಪಡಿಸಲು ಪೋಸ್ಟರ್ ಪ್ರಸ್ತುತಿ ಉತ್ತಮ ಮಾಧ್ಯಮವಾಗಿದೆ ಸಮಾಜದ ಸ್ಥಿತಿಗತಿಗಳು ಎದುರಾಗುವ ಸವಾಲುಗಳು, ಮತ್ತು ಅದಕ್ಕಿರುವ ಪರಿಹಾರಗಳನ್ನು ಪೋಸ್ಟರ್ ಪ್ರಸ್ತುತಿಯ ಮೂಲಕ ಪರಿಣಾಮಕಾರಿಯಾಗಿ ತಮ್ಮ ಅಭಿಪ್ರಾಯವನ್ನು ಮಂಡಿಸುವುದಕ್ಕೆ ಸಹಕಾರಿಯಾಗಿರುತ್ತದೆ ವಿದ್ಯಾರ್ಥಿಗಳು ಕೌಶಲ್ಯ ಹಾಗೂ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ, ತಾವು ನಿರ್ವಹಿಸುವ ವೃತ್ತಿಯ ಬಗ್ಗೆ ಗೌರವ ಭಾವನೆ ಹೊಂದಬೇಕು. ಹಾಗೂ ಉನ್ನತ ಗುರಿಗಳನ್ನು ಹೊಂದುವುದು ಮುಖ್ಯ ಎಂದು ತಿಳಿಸಿದರು.

ಅನುಭವದಿಂದ ವೃತ್ತಿ ಬದುಕಿನೆಡೆಗೆ ಎನ್ನುವ ವಿಷಯವನ್ನು ಸಂಪನ್ಮೂಲ ವ್ಯಕ್ತಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಸಚಿನ್ ಹುಗ್ಗಿ ಮಂಡಿಸಿ ಮಾತನಾಡಿ ಪುಸ್ತಕದ ಸಿದ್ಧಾಂತಕ್ಕೂ ಮತ್ತು ಪ್ರಾಯೋಗಿಕ ಅನುಭವಕ್ಕೂ ವ್ಯತ್ಯಾಸವಿರುವುದರಿಂದ . ವಿದ್ಯಾರ್ಥಿಗಳು ಉತ್ತಮ ಜ್ಞಾನ



ಹಾಗೂ ಪ್ರಾಯೋಗಿಕ ಕಲಿಕೆಯ ಅನುಭವ ಪಡೆದುಕೊಂಡು ಸಮಾಜದೊಂದಿಗೆ ಸಂವಹನ ನಡೆಸುವುದು, ಜನರ ಬದುಕಿನ ಸ್ಥಿತಿಗತಿಗಳನ್ನು ಅರಿತುಕೊಳ್ಳುವುದು ಮುಖ್ಯವಾಗಿರುತ್ತದೆ. ಅನುಭವದ ಕಲಿಕೆ ಸದಾ ಶಾಶ್ವತವಾಗಿದ್ದು, ಸಾಧನೆ ಮಾಡಲು ಸಹಕಾರಿಯಾಗಿರುತ್ತದೆ ಎಂದು ತಿಳಿಸಿದರು.

ಕಾಲೇಜಿನ ಬಿ.ಎ. ತೃತೀಯ ವರ್ಷದ ಎಲ್ಲಾ ವಿದ್ಯಾರ್ಥಿಗಳು ತಾವು ಇಂಟರ್ನ್ಶಿಪ್ ಅವಧಿಯಲ್ಲಿ ವಿವಿಧ ಕಾರ್ಯಕ್ಷೇತ್ರಗಳಲ್ಲಿ ಪಡೆದ ಪ್ರಾಯೋಗಿಕ ಅನುಭವಗಳನ್ನು ಕಾರ್ಡ್ಬೋರ್ಡ್ಗಳ ಮೇಲೆ ಪೋಸ್ಟರ್ ರೂಪದಲ್ಲಿ ಪ್ರಸ್ತುತಿ ಪಡಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಉಪಪ್ರಾಚಾರ್ಯರಾದ ಖಾಸಿಂಸಾಬ್, ಕಲಾವಿಭಾಗದ ಮುಖ್ಯಸ್ಥರಾದ ದೇವಣ್ಣ ಹಾಗು ಕಾಲೇಜಿನ ವಿದ್ಯಾರ್ಥಿಗಳು ಇದ್ದರು.

## ಶ್ರೀ ಕಲ್ಮಠ ಬೃಹನ್ಮಠ ವತಿಯಿಂದ ಉಚಿತ ವಸತಿಯುತ ಶಿಕ್ಷಣ: ಎಸ್.ಎಸ್. ಪಾಟೀಲ್

**ಮಾನ್ವಿ:** ಪಟ್ಟಣದ ಶ್ರೀ ಕಲ್ಮಠದಲ್ಲಿ ಕಲ್ಮಠ ಬೃಹನ್ಮಠ ವತಿಯಿಂದ ಲಿಂ. ಶ್ರೀ. ಡಾ.ಶಿವಮೂರ್ತಿ ಶಿಒವಾಚಾರ್ಯ ಮಹಾಸ್ವಾಮಿಗಳವರ ಸ್ಮರಣಾರ್ಥ 6 ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ ವರೆಗೆ ಬಾಲಕರಿಗೆ ಉಚಿತ ವಸತಿಯುತವಾದ ಶಿಕ್ಷಣವನ್ನು ನೀಡಲಾಗುತ್ತಿದು ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ವೇದ ಶಿಕ್ಷಣ, ಸಂಗೀತ, ಗಣಕಯಂತ್ರ ಜ್ಞಾನ, ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮ ಭಾಷೆ ಬಗ್ಗೆ ಭೋದನೆ,ನೀಡಲಾಗುವುದು ಆಸಕ್ತ ವಿದ್ಯಾರ್ಥಿಗಳು ಮೇ.25ರೊಳಗಾಗಿ ತಮ್ಮ ಸಂಪೂರ್ಣ ಮಾಹಿತಿಯೊಂದಿಗೆ ಅರ್ಜಿಗಳನ್ನು ಶ್ರೀ ಪಂಪಾ ವಿರೂಪಾಕ್ಷೇಶ್ವರ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿಮ ಅಡಳಿತಾಧಿಕಾರಿಗಳು ಹಾಗೂ ಪ್ರಾಚಾರ್ಯರಿಗೆ ಸಲ್ಲಿಸಬಹುದಾಗಿದೆ ಮೇ.30 ರಂದು ಪ್ರವೇಶ ಪರೀಕ್ಷೆಯ ಇರುತ್ತದೆ ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರಾದ ಎಸ್.ಎಸ್. ಪಾಟೀಲ್ ದೂ.ಸಂಖ್ಯೆ 9449690136 ಹಾಗೂ ಶಿಕ್ಷಕರಾದ ನರಸಿಂಹ ದೂ.ಸಂಖ್ಯೆ 9945509231 ಕ್ಕೆ ಸಂಪರ್ಕಿಸಬಹುದಾಗಿದೆ.

## ಮೇ.18 ರಂದು ರಾಜಲಬಂಡಾ 33 ಕೆ.ವಿ. ವಿದ್ಯುತ್ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯತ್ ಪೂರೈಕೆಯಲ್ಲಿ ಅಡಚಣೆ

**ಮಾನ್ವಿ:** ತಾಲೂಕಿನ ಕುರ್ಡಿ ಗ್ರಾಮದಿಂದ ರಾಜಲಬಂಡಾ ವರೆಗೆ 33 ಕೆ.ವಿ. ವಿದ್ಯುತ್ ಮಾರ್ಗ ದುರಸ್ತಿ ಹಿನ್ನೆಲೆಯಲ್ಲಿ ಮೇ.18 ರಂದು ಬೆಳಿಗ್ಗೆ 10ರಿಂದ ಸಂಜೆ 4 ರವರೆಗೆ ಶಾಸ್ತ್ರಿಕ್ಯಾಂಪ್, ಸುಂಕೇಶ್ವರ ತಾಂಡ,ಸುಂಕೇಶ್ವರ, ರಾಜಲಬಂಡ, ಬೈಲ್ ಮರ್ಚೆಡ್, ಗೋರ್ಕಲ್,ತಮ್ಮಪೂರ್,ವಲ್ಕಂದಿನ್ನಿ, ಜೂಕುರು,ಕಂಬಳೆತ್ತಿ,ಹರನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ವಿದ್ಯೂತ್ ಪೂರೈಕೆಯಲ್ಲಿ ವ್ಯತ್ಯಾಯ ಉಂಟಾಗಲಿದೆ ಎಂದು ಮಾನ್ವಿ ಜೆಸ್ಕಾಂ ಇಲಾಖೆಯ ಎ.ಇ.ಇ. ವೈಜನಾಥಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಲಬುರಗಿ ಪ್ರಗತಿಯ 'ಧ್ರುವತಾರೆ'– ಅಭಿವೃದ್ಧಿಯ ಚೇತನ ಫೌಜಿಯಾ ತರನ್ನುಮ್

ಧೈರ್ಯದ ದಾರಿ

**ಕಲಬುರಗಿ:** ಸಾರ್ವಜನಿಕ ಆಡಳಿತದಲ್ಲಿ ದಕ್ಷತೆ ಮತ್ತು ಸಂವೇದನಾಶೀಲತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ಎರಡನ್ನೂ ಮೈಗೂಡಿಸಿಕೊಂಡು, ಕಲಬುರಗಿ ಜಿಲ್ಲೆಯ ಸಮಗ್ರ ವಿಕಾಸಕ್ಕೆ ಹೊಸ ಭಾಷ್ಯ ಬರೆದವರು 2015ರ ಬ್ಯಾಚ್‌ನ ಐಎಎಸ್ ಅಧಿಕಾರಿ ಬಿ. ಫೌಜಿಯಾ ತರನ್ನುಮ್. ಕಲ್ಯಾಣ ಕರ್ನಾಟಕದ ಆಡಳಿತ ಕೇಂದ್ರವಾದ ಕಲಬುರಗಿಯಲ್ಲಿ ಕೇವಲ ಫೈಲ್‌ಗಳ ವಿಲೇವಾರಿಗೆ ಸೀಮಿತವಾಗದೆ, ಜಿಲ್ಲೆಯ ಸಾಂಪ್ರದಾಯಿಕ ಆಹಾರಕ್ಕೆ ಜಾಗತಿಕ ಮಾನ್ಯತೆ ತಂದುಕೊಡುವಲ್ಲಿ, ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿ ಮಾಡುವಲ್ಲಿ ಮತ್ತು ಅತ್ಯುತ್ತಮ ಚುನಾವಣಾ ಪದ್ಧತಿಯನ್ನು ಜಾರಿಗೊಳಿಸುವಲ್ಲಿ ಇವರು ತೋರಿದ ದಕ್ಷತೆ ಅನನ್ಯವಾದುದು.

ರಾಷ್ಟ್ರಪತಿಗಳಿಂದ ಸಿಕ್ಕ ಮಹೋನ್ನತ ಗೌರವ: ಚುನಾವಣಾ ಪ್ರಕ್ರಿಯೆಯಲ್ಲಿ ತಾಂತ್ರಿಕತೆ ಮತ್ತು ಪಾರದರ್ಶಕತೆಯನ್ನು ಅಳವಡಿಸಿಕೊಳ್ಳುವಲ್ಲಿ ತರನ್ನುಮ್ ಅವರು ಮಾಡಿದ ಸಾಧನೆಯನ್ನು ಪರಿಗಣಿಸಿ, ಭಾರತ ಚುನಾವಣಾ ಆಯೋಗವು (ಇಅಖ) 2024–25ನೇ ಸಾಲಿನ ಪ್ರಶಸ್ತಿಗೆ ಇವರನ್ನು ಆಯ್ಕೆ ಮಾಡಿತ್ತು. ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆಯಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಾಧನೆ ಮಾಡಿದ ಕರ್ನಾಟಕದ ಏಕೈಕ ಅಧಿಕಾರಿ ಎಂಬ ಹೆಗ್ಗಳಿಕೆ ಇವರದ್ದಾಯಿತು.

ಆರೋಗ್ಯ ಕ್ಷೇತ್ರದಲ್ಲಿ ಕಲಬುರಗಿ ಮಾದರಿ–ನೀತಿ ಆಯೋಗವು ಕಲಬುರಗಿ ಜಿಲ್ಲೆಯ ಆರೋಗ್ಯ ಸುಧಾರಣೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದೆ. ವಿಶಾಖಪಟ್ಟಣಂನಲ್ಲಿ ನಡೆದ ಕಾರ್ಯಾಗಾರದಲ್ಲಿ ಜಿಲ್ಲೆಯ ಮಹತ್ವಾಕಾಂಕ್ಷೆಯ ತಾಲ್ಲೂಕುಗಳಲ್ಲಿ ಪ್ರಸವ ಪೂರ್ವ ನೋಂದಣಿ ಮತ್ತು ಸಾಂಸ್ಥಿಕ ಹೆರಿಗೆಯಲ್ಲಿ ಶೇ. 100ರಷ್ಟು ಪ್ರಗತಿ ಸಾಧಿಸಿರುವುದು ಇಡೀ ದೇಶದ ಗಮನ ಸೆಳೆದಿದೆ. ಮೊದಲ ತ್ರೈಮಾಸಿಕದ ನೋಂದಣಿ ಮತ್ತು ಪೌಷ್ಟಿಕ ಆಹಾರ ವಿತರಣೆಯ ಮೂಲಕ ತಾಯಿ–ಮಗುವಿನ ಮರಣ ಪ್ರಮಾಣ ತಗ್ಗಿಸಲು ಇವರು ಹಾಕಿಕೊಟ್ಟ ಯೋಜನೆಗಳು ಈಗ 'ಕಲಬುರಗಿ ಮಾದರಿ'ಯಾಗಿ ಗುರುತಿಸಲ್ಪಟ್ಟಿವೆ.

ಖಡಕ್ ರೊಟ್ಟಿಗೆ ಜಾಗತಿಕ ಬ್ರ್ಯಾಂಡ್ ಮೌಲ್ಯ: ಕಲಬುರಗಿಯ ಮನೆಮಾತಾದ 'ಮಾಲ್ದಂಡಿ' ಜೋಳದ ರೊಟ್ಟಿಗೆ ಅಂತರಾಷ್ಟ್ರೀಯ ಮಾರುಕಟ್ಟೆ ಕಲ್ಪಿಸಿಕೊಟ್ಟಿದ್ದು ತರನ್ನುಮ್ ಅವರ ದೊಡ್ಡ ಸಾಧನೆ. ಕೋಟನೂರ ಡಿ ಗ್ರಾಮದಲ್ಲಿ 55 ಲಕ್ಷ ರೂ. ಸಿಎಸ್‌ಆರ್ ಅನುದಾನದಡಿ ಸುಧಾರಿತ ಪ್ಯಾಕಿಂಗ್ ಘಟಕ ಸ್ಥಾಪಿಸಿ, ಸಾವಿರಾರು ಗ್ರಾಮೀಣ ಮಹಿಳೆಯರಿಗೆ ಉದ್ಯೋಗ ಮತ್ತು ಉತ್ತಮ ಆದಾಯ ಒದಗಿಸಿದರು. ಕಲಬುರಗಿ ರೊಟ್ಟಿಗೆ 'ಜಿಐ ಟ್ಯಾಗ್' (ಉಐ ಖಿಚಿರ) ಪಡೆಯುವ ಇವರ ಆಶಯವು ಜಿಲ್ಲೆಯ ಆಹಾರ ಸಂಸ್ಕೃತಿಗೆ ಹೊಸ ಆಯಾಮ ನೀಡಲಿದೆ.

ತಂತ್ರಜ್ಞಾನ ಮತ್ತು ಭೂ ದಾಖಲೆಗಳ ಸಂರಕ್ಷಣೆ: ಸರ್ಕಾರಿ ಜಮೀನುಗಳನ್ನು ಅತಿಕ್ರಮಣದಿಂದ ಮುಕ್ತಗೊಳಿಸಲು ಇವರು ಜಾರಿಗೆ ತಂದ "ಲ್ಯಾಂಡ್ ಬೀಟ್" ವ್ಯವಸ್ಥೆ ರಾಜ್ಯಕ್ಕೆ ಮಾದರಿ. ಚಿಂಚೋಳಿ ತಾಲ್ಲೂಕಿನಲ್ಲಿ 15 ಲಕ್ಷಕ್ಕೂ ಹೆಚ್ಚು ದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಮೂಲಕ ಕಂದಾಯ ಇಲಾಖೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದ್ದಾರೆ. 2ನೇಪುಟಕ್ಕೆ



ಮೊದಲನೇ ಪುಟದಿಂದ

# ಕಲಬುರಗಿ ಪ್ರಗತಿಯ 'ಧ್ರುವತಾರೆ' ಅಭಿವೃದ್ಧಿಯ ಚೇತನ ಫೌಜಿಯಾ ತರನ್ನುಮ್

ಇದು ಸಾರ್ವಜನಿಕರಿಗೆ ಯಾವುದೇ ಮಧ್ಯವರ್ತಿಗಳ ಕಾಟವಿಲ್ಲದೆ ತ್ವರಿತವಾಗಿ ಸೇವೆ ಸಿಗುವಂತೆ ಮಾಡಿದೆ.

ಕ್ರೀಡೆ ಮತ್ತು ಸಂಸ್ಕೃತಿಗೆ ಬೆನ್ನೆಲುಬು: ಕಲಬುರಗಿಯನ್ನು ಕೇವಲ ಬಿಸಿಲ ನಾಡು ಎನ್ನದೆ, ಅದನ್ನು ಕ್ರೀಡಾ ಮತ್ತು ಕಲಾ ನಗರಿಯನ್ನಾಗಿ ರೂಪಿಸುವಲ್ಲಿ ಇವರು ಶ್ರಮಿಸಿದರು. ಅಂತರಾಷ್ಟ್ರೀಯ ಮಟ್ಟದ ಟೆನಿಸ್ ಟೂರ್ನಿಗಳನ್ನು ಆಯೋಜಿಸಿ ಜಿಲ್ಲೆಯ ಕ್ರೀಡಾಪಟುಗಳಿಗೆ ಸ್ಫೂರ್ತಿ ನೀಡಿದರು. ಬೆಂಗಳೂರಿನ ಖ್ಯಾತ 'ರಂಗ ಶಂಕರ' ತಂಡವನ್ನು ಜಿಲ್ಲೆಗೆ ಕರೆಸಿ ನಾಟಕೋತ್ಸವ ನಡೆಸುವ ಮೂಲಕ ಜಿಲ್ಲೆಯ ಸಾಂಸ್ಕೃತಿಕ ಕಳೆಯನ್ನು ಹೆಚ್ಚಿಸಿದರು.

ಸಂಕಷ್ಟದಲ್ಲಿ ಸ್ಪಂದಿಸುವ ಸಂವೇದನಾಶೀಲತೆ: ರಷ್ಯಾ-ಉಕ್ರೇನ್ ಯುದ್ಧದ ಸಮಯದಲ್ಲಿ ಅತಂತ್ರರಾಗಿದ್ದ ಜಿಲ್ಲೆಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರುವಲ್ಲಿ ಇವರು ವಹಿಸಿದ ಕಾಳಜಿ ಮೆಚ್ಚುವಂತದ್ದು. ಪ್ರತಿ ಹಂತದಲ್ಲೂ ಪೋಷಕರ ಜೊತೆಗಿದ್ದು, ವಿದೇಶಾಂಗ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ವಿದ್ಯಾರ್ಥಿಗಳು ಮನೆ ಸೇರುವವರೆಗೆ ಇವರು ತೋರಿದ ಕಾಳಜಿ ಅವರ "ಜನಸ್ನೇಹಿ ಆಡಳಿತ"ಕ್ಕೆ ಸಾಕ್ಷಿ.

'ಜನಸ್ಪಂದನ'ದಂತಹ ಕಾರ್ಯಕ್ರಮಗಳ ಮೂಲಕ ಆಡಳಿತವನ್ನು ಹಳ್ಳಿಯ ಮನೆ ಬಾಗಿಲಿಗೆ ತಂದ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಕಲಬುರಗಿಯಲ್ಲಿ ಕೆಲಸ ಮಾಡಿದ್ದು ಒಂದು ಸಾರ್ಥಕ ಕಾಲಘಟ್ಟ. ಅಭಿವೃದ್ಧಿ ಎಂದರೆ ಕೇವಲ ರಸ್ತೆ, ಕಟ್ಟಡಗಳಲ್ಲ, ಬದಲಾಗಿ ಜನರ ಬದುಕಿನಲ್ಲಿ ತರುವ ಗುಣಾತ್ಮಕ ಬದಲಾವಣೆ ಎಂಬುದನ್ನು ಇವರು ಸಾಬೀತುಪಡಿಸಿದ್ದಾರೆ. ಈಗ ವರ್ಗಾವಣೆಯಾಗಿ ತೆರಳುತ್ತಿರುವ ಇವರು ಕಲಬುರಗಿಯ ಜನರ ಮನಸ್ಸಿನಲ್ಲಿ ಎಂದಿಗೂ 'ಅಭಿವೃದ್ಧಿಯ ಚೇತನ'ವಾಗಿಯೇ ಉಳಿಯಲಿದ್ದಾರೆ.

ಸಾಧನೆಯ ಹಾದಿಯಲ್ಲೊಂದು ನೋಟ:
ಐಎಎಸ್ ಬ್ಯಾಚ್: 2015 (ಕರ್ನಾಟಕ ಕೆಡರ್).
ಜಾಗತಿಕ ಸಾಧನೆ: ಕಲಬುರಗಿ 'ಖಡಕ್ ರೊಟ್ಟಿ'ಯನ್ನು ಅಮೆರಿಕಾ, ಯುಕೆ ಮತ್ತು ಆಸ್ಟ್ರೇಲಿಯಾ ಮಾರುಕಟ್ಟೆಗೆ ತಲುಪಿಸಿದ್ದು.
ಆರೋಗ್ಯ ಕ್ರಾಂತಿ: ಪ್ರಸವ ಪೂರ್ವ ನೋಂದಣಿಯಲ್ಲಿ ಶೇ. 100ರಷ್ಟು ಸಾಧನೆ (ನೀತಿ ಆಯೋಗದ ಮೆಚ್ಚುಗೆ).
ಡಿಜಿಟಲೀಕರಣ: 31,972 ಸರ್ಕಾರಿ ಆಸ್ತಿಗಳ ಪೈಕಿ ಶೇ. 93ಕ್ಕೂ ಹೆಚ್ಚು ಆಸ್ತಿಗಳ ಐಡೆಂಟಿಫಿಕೇಶನ್.
ಸಾಂಸ್ಕೃತಿಕ ಕೊಡುಗೆ: 'ರಂಗ ಶಂಕರ' ಸಹಯೋಗದೊಂದಿಗೆ ರಂಗೋತ್ಸವ ಮತ್ತು ಅಂತರಾಷ್ಟ್ರೀಯ ಟೆನಿಸ್ ಟೂರ್ನಿಗಳ ಆಯೋಜನೆ

ಪ್ರೇಮಾ D/o ಶ್ರೀಮಂತ
ಮೊಬೈಲ್ ನಂಬರ್ - 8147240154
ಇಮೇಲ್ - premashrimanth@gmail.com

# ಇಂಧನ ಮಿತ ಬಳಕೆಗೆ ಪ್ರಧಾನಿ ನೀಡಿದ ಕರೆಗೆ ದೇಶಾದ್ಯಂತ ಸ್ಪಂದನೆ

ಫ್ರಮ್ ಹೋಮ್ ಮತ್ತು ಆನ್‌ಲೈನ್ ಸಭೆಗಳನ್ನು ಸಾಧ್ಯವಾದಷ್ಟು ಮರುಪರಿಚಯಿಸುವಂತೆ ಕೋರಿದ್ದರು.

ಇಂಧನದ ಜೊತೆಗೆ ಮುಂದಿನ ಒಂದು ವರ್ಷದವರೆಗೆ ಚಿನ್ನ ಖರೀದಿಸದಿರಲು ಮತ್ತು ವಿದೇಶಿ ಪ್ರವಾಸಗಳನ್ನು ಮುಂದೂಡಲು ಕರೆ ನೀಡಿದ್ದರು. ಸ್ವತಃ ಪ್ರಧಾನಿ ಮೋದಿಯವರು ತಮ ಅಧಿಕೃತ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಶೇಕಡಾ 50 ರಷ್ಟು ಕಡಿತಗೊಳಿಸುವ ಮೂಲಕ ದೇಶಕ್ಕೆ ಮಾದರಿಯಾಗಿದ್ದಾರೆ.

# ವೈಜ್ಞಾನಿಕ ಮಣ್ಣು ಪರೀಕ್ಷೆ, ಸಮತೋಲನ ಗೊಬ್ಬರ ಬಳಕೆ-ಉತ್ತಮ ಇಳುವರಿಗೆ ಮಾರ್ಗದರ್ಶಿ

**ಆಳಂದ:ಮೇ.16:** ಬೇಸಿಗೆಯ ಕೊನೆಯ ಹಂತ ತಲುಪುತ್ತಿದ್ದಂತೆ ಮುಂಗಾರು ಹಂಗಾಮಿನ ಮುನ್ಸೂಚನೆ ಕಾಣಿಸಿಕೊಳ್ಳುತ್ತಿದೆ. ಇನ್ನೇನು ಜೂನ್ ತಿಂಗಳ ಮಳೆಯ ಆಗಮನದ ನಿರೀಕ್ಷೆಯಲ್ಲಿ ಆಳಂದ ತಾಲೂಕಿನಾದ್ಯಂತ ರೈತರು ತಮ್ಮ ಹೊಲಗಳಲ್ಲಿ ಭೂಮಿ ಸಿದ್ಧತಾ ಕಾರ್ಯಗಳಿಗೆ ವೇಗ ನೀಡಿದ್ದಾರೆ. ವಿಶೇಷವಾಗಿ ಸಾಂಪ್ರದಾಯಿಕ ಕೃಷಿ ವಿಧಾನವಾದ "ಮಾಗಿ ಉಳುಮೆ" ಕೈಗೊಂಡು ಕಡಿಮೆ ಖರ್ಚಿನಲ್ಲಿ ಉತ್ತಮ ಉತ್ಪಾದನೆ ಪಡೆಯಲು ಮುಂದಾಗಿರುವುದು ಗಮನಾರ್ಹವಾಗಿದೆ.



ಕಳೆಗಳ ನಿಯಂತ್ರಣ: ಮಾಗಿ ಉಳುಮೆಯಿಂದ ಕಳೆಗಳ ಬೇರುಗಳು ಮತ್ತು ಗಡ್ಡೆಗಳನ್ನು ಸುಲಭವಾಗಿ ತೆಗೆಯಬಹುದು. ಇದರಿಂದ ಮುಂದಿನ ಹಂತದಲ್ಲಿ ಕಳೆ ನಿಯಂತ್ರಣಕ್ಕೆ ಬೇಕಾಗುವ ಕೂಲಿ ಹಾಗೂ ವೆಚ್ಚ ಕಡಿಮೆಯಾಗುತ್ತದೆ.

ಕೃಷಿಯಲ್ಲಿ ಮಣ್ಣಿನ ಪಾತ್ರ ಅತ್ಯಂತ ಮಹತ್ತರವಾಗಿದೆ. ಯಾವುದೇ ಬೆಳೆಯ ಉತ್ತಮ ಬೆಳವಣಿಗೆ ಹಾಗೂ ಇಳುವರಿಗೆ ಮಣ್ಣಿನ ಫಲವತ್ತತೆ ಉನ್ನತ ಮಟ್ಟದಲ್ಲಿರಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಪೊ?ಷಕಾಂಶಗಳ ಸರಿಯಾದ ಮಾಹಿತಿ ಇಲ್ಲದೆ ಅನಾವಶ್ಯಕವಾಗಿ ರಾಸಾಯನಿಕ ಗೊಬ್ಬರಗಳನ್ನು ಬಳಕೆ ಮಾಡುವುದರಿಂದ ಮಣ್ಣಿನ ಗುಣಮಟ್ಟ ಕುಸಿಯುತ್ತಿದ್ದು, ಭೂಮಿ ಕ್ರಮೇಣ ಬರಡಾಗುವ ಆತಂಕ ವ್ಯಕ್ತವಾಗುತ್ತಿದೆ. ಇದನ್ನು ತಡೆಯಲು ರೈತರು ಬಿತ್ತನೆಗೂ ಮುನ್ನ ಮಣ್ಣಿನ ಮಾದರಿಯನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ ಪರೀಕ್ಷೆಗೊಳಪಡಿಸಿ, ವರದಿ ಆಧರಿಸಿ ಬೆಳೆ ಆಯ್ಕೆ ಹಾಗೂ ಗೊಬ್ಬರ ಪ್ರಮಾಣ ನಿಗದಿ ಮಾಡುವುದು ಅಗತ್ಯವಾಗಿದೆ.

ಪ್ರಸ್ತುತ ಗೊಬ್ಬರಗಳ ಬೆಲೆ ಏರಿಕೆಯಾಗಿರುವ ಹಿನ್ನಲೆಯಲ್ಲಿ ಅಗತ್ಯಕ್ಕೆ ತಕ್ಕಂತೆ ಮಾತ್ರ ಪೊ?ಷಕಾಂಶಗಳನ್ನು ನೀಡುವುದರಿಂದ ಖರ್ಚು ಕಡಿಮೆಯಾಗುವುದರ ಜೊತೆಗೆ ಮಣ್ಣಿನ ಆರೋಗ್ಯ ಹಾಗೂ ಮಾನವ ಆರೋಗ್ಯಕ್ಕೂ ಲಾಭವಾಗುತ್ತದೆ. ಇತ್ತೀಚೆಗೆ ಕೆಲವೆಡೆ ಹದವಾದ ಮಳೆಯಾಗಿರುವುದರಿಂದ ಮಾಗಿ ಉಳುಮೆ ಕೈಗೊಳ್ಳಲು ಸೂಕ್ತ ಸಮಯವಾಗಿದ್ದು, ಈ ವಿಧಾನವು ಮುಂಗಾರು ಬೇಸಾಯಕ್ಕೆ ಭೂಮಿಯನ್ನು ಸಜ್ಜುಗೊಳಿಸುವಲ್ಲಿ ಬಹುಪಯೋಗಿಯಾಗಿದೆ.

ಮಾಗಿ ಉಳುಮೆ ಎಂದರೇನು?
ಮಾಗಿ ಉಳುಮೆ ಎಂದರೆ ಮುಂಗಾರು ಹಂಗಾಮಿಗೆ ಮುಂಚೆ ಹಾಗೂ ಹಿಂಗಾರು ಬೆಳೆಗಳ ಕಟಾವಿನ ನಂತರ ಬೇಸಿಗೆಯಲ್ಲಿ ಕೈಗೊಳ್ಳುವ ಕಡಿಮೆ ಖರ್ಚಿನ ಆದರೆ ಬಹು ಪ್ರಯೋಜನಕಾರಿ ಕೃಷಿ ಕ್ರಮವಾಗಿದೆ.
ಮಾಗಿ ಉಳುಮೆಯ ಪ್ರಮುಖ ಪ್ರಯೋಜನಗಳು
ಮಣ್ಣಿನ ಮೇಲಿನ ಪರಿಣಾಮ: ಮಾಗಿ ಉಳುಮೆಯಿಂದ ಮಣ್ಣು ಸಡಿಲವಾಗುತ್ತಿದ್ದು, ಮಳೆಯ ನೀರು ಸುಲಭವಾಗಿ ಭೂಮಿಯಲ್ಲಿ ಇಂಗುತ್ತದೆ. ಇದರಿಂದ ತೇವಾಂಶ ಮತ್ತು ಭೂಗರ್ಭ ಜಲಮಟ್ಟ ಹೆಚ್ಚಾಗಿ ಬೀಜಗಳ ಮೊಳಕೆ ಪ್ರಮಾಣ ಹೆಚ್ಚುತ್ತದೆ. ಬೇರುಗಳು ಆಳಕ್ಕೆ ಬೆಳೆಯಲು ಅನುಕೂಲವಾಗುವುದರಿಂದ ಬೆಳೆಗಳು ಸದೃಢವಾಗಿ ಬೆಳೆಯುತ್ತವೆ. ಇಳಿಜಾರಿಗೆ ಅಡ್ಡವಾಗಿ ಉಳುಮೆ ಮಾಡಿದರೆ ಮಣ್ಣು ಮತ್ತು ನೀರಿನ ಸಂರಕ್ಷಣೆ ಸಾಧ್ಯವಾಗುತ್ತದೆ ಎಂದು ಮಣ್ಣು ವಿಜ್ಞಾನಿ ಡಾ. ಶ್ರೀನಿವಾಸ ಬಿ.ವಿ ಅವರು ತಿಳಿಸಿದ್ದಾರೆ.

ಕೀಟ ಹಾಗೂ ರೋಗ ನಿಯಂತ್ರಣ: ಮಣ್ಣಿನೊಳಗಿನ ಕೀಟಗಳ ಕೋಶಗಳು ಸೂರ್ಯನ ತಾಪಕ್ಕೆ ಒಳಗಾಗುವುದರಿಂದ ಅವುಗಳ ಸಂಖ್ಯೆ ಕಡಿಮೆಯಾಗುತ್ತದೆ. ಇದರಿಂದ ಭವಿಷ್ಯದಲ್ಲಿ ಕೀಟನಾಶಕ ಬಳಕೆ ಕಡಿಮೆ ಮಾಡಬಹುದು.
ಪರಿಸರದ ಮೇಲೆ ಪರಿಣಾಮ: ಕೀಟಗಳ ಕೋಶಗಳನ್ನು ಪಕ್ಷಿಗಳು ತಿನ್ನುವುದರಿಂದ ಜೈವಿಕ ನಿಯಂತ್ರಣ ಸಾಧ್ಯವಾಗುತ್ತದೆ. ಇದರಿಂದ ರಾಸಾಯನಿಕಗಳ ಬಳಕೆ ಕಡಿಮೆಯಾಗುತ್ತಿದ್ದು, ಮಣ್ಣಿನ ಜೈವಿಕ ಚಟುವಟಿಕೆ ಹೆಚ್ಚುತ್ತದೆ.

ಬೆಳೆ ಉಳಿಕೆಗಳ ಉಪಯೋಗ: ಬೆಳೆ ಕಟಾವಿನ ನಂತರ ಉಳಿದ ಅವಶೇಷಗಳು ಮಣ್ಣಿನಲ್ಲಿ ಕೊಳೆತು ಸಾವಯವ ಗೊಬ್ಬರವಾಗಿ ಮಾರ್ಪಡುತ್ತವೆ. ಇದು ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ.
ವೈಜ್ಞಾನಿಕ ಸಲಹೆ: "ರೈತರು ಮಾಗಿ ಉಳುಮೆ ಕೈಗೊಂಡು ಮಣ್ಣು ಪರೀಕ್ಷೆ ಆಧಾರಿತವಾಗಿ ಸಮತೋಲನ ಗೊಬ್ಬರ ಬಳಕೆ ಮಾಡಿದರೆ ಮಣ್ಣಿನ ಆರೋಗ್ಯವನ್ನು ದೀರ್ಘಕಾಲ ಕಾಪಾಡಿಕೊಳ್ಳಬಹುದು. ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಪಡೆದು ಆದಾಯವನ್ನೂ ಹೆಚ್ಚಿಸಿಕೊಳ್ಳಬಹುದು," ಎಂದು ಕೃಷಿ ವಿಜ್ಞಾನ ಕೇಂದ್ರದ ಡಾ. ಜಹೀರ್ ಅಹಮದ್, ಡಾ. ಶ್ರೀನಿವಾಸ ಬಿ.ವಿ, ಡಾ. ರಾಜು ಜಿ. ತೆಗ್ಗಳ್ಳಿ ಮತ್ತು ಡಾ. ಯುಸುಫ್ ಅಲಿ ತಿಳಿಸಿದ್ದಾರೆ.
ಮುಂಗಾರು ಹಂಗಾಮಿಗೆ ಮುನ್ನವೇ ಭೂಮಿಯನ್ನು ವೈಜ್ಞಾನಿಕವಾಗಿ ಸಜ್ಜುಗೊಳಿಸುವ ಈ ಕ್ರಮ ರೈತರ ಆರ್ಥಿಕ ಸ್ಥಿರತೆಗೆ ಮಾತ್ರವಲ್ಲ, ಆರೋಗ್ಯಕರ ಸಮಾಜ ನಿರ್ಮಾಣಕ್ಕೂ ಪೂರಕವಾಗಲಿದೆ ಎಂಬುದು ಕೃಷಿ ತಜ್ಞರ ಅಭಿಪ್ರಾಯವಾಗಿದೆ.

# ಮೆಟ್ರೋದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಯಾಣ





**ಬೆಂಗಳೂರು,ಮೇ16-** ದೇಶದ ಜನತೆ ಇಂಧನ ಮಿತ ಬಳಕೆ ಮಾಡಬೇಕು ಎಂದ ಪ್ರಧಾನಿ ನರೇಂದ್ರಮೋದಿ ಅವರ ಕರೆಗೆ ಸ್ಪಂಧಿಸಿರುವ ಬಿಜೆಪಿ ರಾಜ್ಯಧ್ಯಕ್ಷ ಬಿ.ವೈ ವಿಜಯೇಂದ್ರ, ತಮ್ಮ ಅಧಿಕೃತ ಕಾರು ಮತ್ತು ಬೆಂಗಾವಲು ವಾಹನಗಳನ್ನು ಕಡಿಮೆ ಮಾಡಿ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯಾದ ಮೆಟ್ರೋರೈಲನ್ನು ಬಳಸುವ ನಿರ್ಧಾರ ಮಾಡಿದ್ದಾರೆ.

ಪಕ್ಷದ ಕಾರ್ಯಕ್ರಮದಲ್ಲಿ ಭಾಗಿಯಾಗುವ ಸಂಬಂಧ ಮೆಜೆಸ್ಟಿಕ್‌ನಿಂದ ಕೆಂಗೇರಿವರೆಗೂ ಮೆಟ್ರೋದಲ್ಲಿ ಪ್ರಯಾಣ ಮಾಡಿ, ಸಾಮಾನ್ಯ ಜನರ ನಡುವೆ ನಿಂತು, ಕುಳಿತು ಪ್ರಯಾಣಿಸಿದ್ದಾರೆ. ಇದೇ ರೀತಿಯಾಗಿ ಕುಂಬಳಗೂಡಿನ ಕಾರ್ಯಕ್ರಮಕ್ಕೂ ಮೆಟ್ರೋ ಮೂಲಕವೇ ತೆರಳಿದರು.

ಇನ್ನು ಮುಂದೆ ಪಕ್ಷದ ಸಭೆ, ಕಾರ್ಯಕ್ರಮಗಳಿಗೆ ಹೋಗುವಾಗ ಸಾರ್ವಜನಕ ವಾಹನಗಳಲ್ಲಿ ಪ್ರಯಾಣ ಮಾಡುವ ಬಗ್ಗೆಯೂ ಚಿಂತನೆ ನಡೆಸಿದ್ದಾರೆ. ಸಾರ್ವಜನಿಕ ಸಾರಿಗೆಯನ್ನು ಬಳಸುವ ಮೂಲಕ ಇಂಧನ ಉಳಿಸುವುದಷ್ಟೆ ಅಲ್ಲ, ಟ್ರಾಫಿಕ್ ದಟ್ಟಣೆ ಕಡಿಮೆ ಮಾಡುವಲ್ಲಿ ಸಹ ಸಹಾಯವಾಗುತ್ತದೆ ಎಂಬ ಸಂದೇಶವನ್ನು ಅವರು ತಮ ನಡೆ ಮೂಲಕ ನೀಡಲು ಯತ್ನಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ನಮ ಹೆಮೆಯ ಪ್ರಧಾನಿ ಮೆಟ್ರೋಲ್, ಡೀಸಲ್ ಮಿತವ್ಯಯಕ್ಕೆ ಸಲಹೆ ಕೊಟ್ಟಿದ್ದಾರೆ. ಅವರು ಸ್ವತಃ ತಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡಿಕೊಂಡಿದ್ದಾರೆ. ಹಾಗಾಗಿ ನಾನು ಕೂಡ ಅವರ ಮಾತಿಗೆ ಸ್ಪಂದಿಸಿ ಮೆಟ್ರೊ?ದಲ್ಲಿ ಪ್ರಯಾಣ ಮಾಡುತ್ತಿದ್ದೇನೆ. ಕುಂಬಳಗೋಡಿನಲ್ಲಿ ನಡೆಯುತ್ತಿರುವ ಸಭೆಯಲ್ಲಿ ಭಾಗವಹಿಸಿ, ಬಳಿಕ ರವಿಶಂಕರ್ ಗುರುಜಿಗಳ ಆಶೀರ್ವಾದ ಪಡೆಯುತ್ತೇನೆ ಎಂದರು.

ಪೆಟ್ರೋಲ್, ಡೀಸಲ್ ಬೆಲೆ ಏರಿಕೆ ಕುರಿತು ವಿರೋಧ ಪಕ್ಷಗಳ ಟೀಕೆಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕೆಲವರು ಇಂಧನ ಬೆಲೆ ಏರಿಕೆ ಕಾರಣಕ್ಕೆ ಪ್ರಧಾನಿಯೇ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸುತ್ತಿರುವ ವಿಚಾರವನ್ನು ತೀವ್ರವಾಗಿ ವಿರೋಧಿಸಿದರಿ/ ಪೆಟ್ರೋಲ್, ಡೀಸಲ್ ಬೆಲೆ ಏರಿಕೆಗಾಗಿ ಪ್ರಧಾನಿ ರಾಜೀನಾಮೆ ಕೇಳುವ ಹಾಗಿದ್ದರೆ, ಕರ್ನಾಟಕದಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಎರಡು ವರ್ಷದ ಹಿಂದೇ ರಾಜೀನಾಮೆ ಕೊಡಬೇಕಿತ್ತು ಎಂದು ತಿರುಗೇಟು ನೀಡಿದರು.

ಚಟಕ್ಕೆ ಮಾತನಾಡುವುದು ಸುಲಭ. ಜಗತ್ತಿನ ಪರಿಸ್ಥಿತಿಗೆ ಅನುಗುಣವಾಗಿ ಬೆಲೆ ನಿಗದಿಯಾಗುತ್ತದೆ, ಕೆಲವೊಮೆ ಬೆಲೆ ಏರಿಕೆಯಾಗುತ್ತದೆ. ಇದು ಕೇವಲ ಭಾರತದಷ್ಟೆ ಅಲ್ಲ, ಜಾಗತಿಕ ಅಂಶಗಳಿಂದ ಪ್ರಭಾವಿತವಾಗಿರುವ ವಿಷಯ ಎಂದು ತೈಲ ಬೆಲೆ ಏರಿಕೆಯನ್ನು ಪರೋಕ್ಷವಾಗಿ ಸಮರ್ಥನೆ ಮಾಡಿಕೊಂಡರು.

# 'ಮೇಡ್ ಇನ್ ಇಂಡಿಯಾ' ಸಿ295 ಯುದ್ಧವಿಮಾನ ಶೀಘ್ರ ಹಾರಾಟ

**ನವದೆಹಲಿ,ಮೇ16-** ಭಾರತದ ರಕ್ಷಣಾ ಉತ್ಪಾದನಾ ವಲಯದಲ್ಲಿ ಶೀಘ್ರದಲ್ಲೇ ಒಂದು ಮಹತ್ತರ ಮೈಲಿಗಲ್ಲು ಸ್ಥಾಪನೆಯಾಗಲಿದೆ. ಗುಜರಾತ್‌ನ ವಡೋದರಾದಲ್ಲಿರುವ 'ಟಾಟಾ ಅಡ್ವಾನ್ಸ್‌ಡ್ ಸಿಸ್ಟಮ್ಸ್ ಲಿಮಿಟೆಡ್' ಘಟಕದಲ್ಲಿ ದೇಶೀಯವಾಗಿ ಜೋಡಿಸಲಾದ ಮೊದಲ 'ಮೇಡ್ ಇನ್ ಇಂಡಿಯಾ' ಸಿ295 ಮಿಲಿಟರಿ ಸಾರಿಗೆ ವಿಮಾನವು ಶೀಘ್ರದಲ್ಲೇ ರೋಲ್-ಔಟ್ (ಹೊರತರಲು) ಆಗಲು ಸಿದ್ಧವಾಗಿದೆ.
ಈ ಮೂಲಕ ದಶಕಗಳಿಂದ ರಕ್ಷಣಾ ವಿಮಾನ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಸಂಸ್ಥೆಯ ಏಕಸ್ವಾಮ್ಯಕ್ಕೆ ಬ್ರೇಕ್ ಬಿದ್ದಂತಾಗಿದ್ದು, ಖಾಸಗಿ ವಲಯದ ಬೃಹತ್ ಹೆಜ್ಜೆಗೆ ನಾಂದಿ ಹಾಡಿದೆ.

ಇತ್ತೀಚೆಗೆ ಈ ವಿಮಾನವನ್ನು ಹ್ಯಾಂಗರ್‌ನಿಂದ ಹೊರಗೆ ತರುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ನಿಗದಿತ ಸಮಯಕ್ಕಿಂತ ಮುಂಚಿತವಾಗಿಯೇ ಯೋಜನೆ ಪ್ರಗತಿ ಸಾಧಿಸಿರುವುದನ್ನು ಸೂಚಿಸುತ್ತಿದೆ. ಶುಕ್ರವಾರವಷ್ಟೇ ಏರ್ ಮಾರ್ಷಲ್ ಎ.ಕೆ. ಭಾರತಿ ಅವರು ವಡೋದರಾ ಘಟಕಕ್ಕೆ ಭೇಟಿ ನೀಡಿ, ವಿಮಾನದ ಮೊದಲ ಹಾರಾಟದ ಸಿದ್ಧತೆಗಳನ್ನು ಪರಿಶೀಲಿಸಿದ್ದಾರೆ.

ಏನಿದು ಯೋಜನೆ?
2021 ರಲ್ಲಿ ಕೇಂದ್ರ ಸರ್ಕಾರವು ಏರ್‌ಬಸ್ ಸಂಸ್ಥೆಯೊಂದಿಗೆ ಸುಮಾರು 21,935 ಕೋಟಿ ವೆಚ್ಚದ ಒಪ್ಪಂದಕ್ಕೆ ಸಹಿ ಹಾಕಿತ್ತು. ಇದರ ಅನ್ವಯ ಒಟ್ಟು 56 ವಿಮಾನಗಳನ್ನು ಭಾರತೀಯ ವಾಯುಪಡೆಗೆ (IAF) ಸೇರ್ಪಡೆಗೊಳಿಸಲಾಗುವುದು. ಮೊದಲ 16 ವಿಮಾನಗಳು ಸ್ಪೇನ್‌ನಿಂದ ನೇರವಾಗಿ ಹಾರಾಟದ ಸ್ಥಿತಿಯಲ್ಲಿ ಭಾರತಕ್ಕೆ ಬಂದಿಳಿದಿದ್ದು, ಉಳಿದ 40 ವಿಮಾನಗಳನ್ನು ಟಾಟಾ ಸಂಸ್ಥೆಯು ಭಾರತದಲ್ಲೇ ಸಂಪೂರ್ಣವಾಗಿ ತಯಾರಿಸುತ್ತಿದೆ. ಈ ವಿಮಾನದ ಶೇ. 85 ಕ್ಕಿಂತ ಹೆಚ್ಚು ಭಾಗ ಹಾಗೂ ಅಂತಿಮ ಜೋಡಣೆ ಭಾರತದಲ್ಲೇ ನಡೆಯುತ್ತಿರುವುದು ವಿಶೇಷ.

ಪ್ರಸ್ತುತ ವಾಯುಪಡೆಯಲ್ಲಿರುವ ಹಳೆಯದಾದ 'ಅವೇರೋ-748' ವಿಮಾನಗಳ ಜಾಗವನ್ನು ಈ ಆಧುನಿಕ ಟ್ವಿನ್-ಟರ್ಬೋಪ್ರೊಪ್ ತಂತ್ರಜ್ಞಾನದ ಅ295 ವಿಮಾನಗಳು ತುಂಬಲಿವೆ. ಇದು ವಾಯುಪಡೆಯ ಸಾಮರ್ಥ್ಯವನ್ನು ದುಪ್ಪಟ್ಟುಗೊಳಿಸಲಿದೆ:ರನ್‌ವೇ ಮಿತಿ ಇಲ್ಲ: ಕೇವಲ 320 ರಿಂದ 670 ಮೀಟರ್‌ನಷ್ಟು ಚಿಕ್ಕದಾದ ಮತ್ತು ಕಚ್ಚಾ ರನ್‌ವೇಗಳಲ್ಲೂ ಇದು ಸುಲಭವಾಗಿ ಟೇಕ್-ಆಫ್ ಮತ್ತು ಲ್ಯಾಂಡಿಂಗ್ ಮಾಡಬಲ್ಲದು.ಭಾರ ಹೊರುವ ಸಾಮರ್ಥ್ಯ: ಇದು 9.5 ಟನ್ ಸರಕು, 70 ಸೈನಿಕರು ಅಥವಾ 48 ಪ್ಯಾರಾಟ್ರೂಪರ್‌ಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ.ಹಿಂಭಾಗದ ರಾಂಪ್ ಸೌಲಭ್ಯ: ಹಳೆಯ ಆವ್ರೊ ವಿಮಾನಗಳಂತೆ ಬದಿಯ ಬಾಗಿಲುಗಳ



ಬದಲಿಗೆ, ಇದರ ಹಿಂಭಾಗದಲ್ಲಿ ದೊಡ್ಡ ರಾಂಪ್ ಇದ್ದು, ಸಣ್ಣ ಫಿರಂಗಿಗಳು ಮತ್ತು ಲಘು ವಾಹನಗಳನ್ನು ಸುಲಭವಾಗಿ ಲೋಡ್-ಅನ್‌ಲೋಡ್ ಮಾಡಬಹುದು.

ಜಮ್ಮು-ಕಾಶ್ಮೀರ, ಲಡಾಖ್‌ನ ದೌಲತ್ ಬೇಗ್ ಓಲ್ಡಿ (16,700 ಅಡಿ ಎತ್ತರ) ಹಾಗೂ ಈಶಾನ್ಯ ಭಾರತದ ಅತ್ಯಂತ ಕಠಿಣ ಗಡಿ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಲು ಇದು ಅತ್ಯಂತ ಸೂಕ್ತವಾಗಿದೆ.ಅಮೆರಿಕದ ವಾಯುಪಡೆಯು ಇರಾನ್‌ನಿಂದ ತನ್ನ ಪೈಲಟ್‌ಗಳನ್ನು ರಕ್ಷಿಸುವಂತಹ ಅತ್ಯಂತ ಕಠಿಣ ಕಾರ್ಯಾಚರಣೆಗಳಲ್ಲಿ ಇದೇ ಮಾದರಿಯ ವಿಮಾನವನ್ನು ಬಳಸಿತ್ತು. ಜಗತ್ತಿನಾದ್ಯಂತ 36 ಕ್ಕೂ ಹೆಚ್ಚು ದೇಶಗಳು ಇದನ್ನು ಬಳಸುತ್ತಿದ್ದು, ಇದು ನಂಬಿಕಸ್ಥ ಯುದ್ಧವಿಮಾನವಾಗಿದೆ. ಭಾರತದಲ್ಲಿರುವ ಬೃಹತ್ 'ಅ-17 ಗ್ಲೋಬ್‌ಮಾಸ್ಟರ್' ಆಯಕಟ್ಟಿನ ಮತ್ತು ದೊಡ್ಡ ಸರಕು ಸಾಗಣೆಗೆ ಬಳಕೆಯಾದರೆ, ಈ ಅ295 ವಿಮಾನವು ಕಿರಿದಾದ ಮತ್ತು ಕಠಿಣ ಗುಡ್ಡಗಾಡು ಪ್ರದೇಶಗಳಿಗೆ ಕ್ಷಿಪ್ರವಾಗಿ ಸೈನಿಕರನ್ನು ಹಾಗೂ ಸಾಮಗ್ರಿಗಳನ್ನು ತಲುಪಿಸಲು ಪೂರಕವಾಗಿ ಕೆಲಸ ಮಾಡಲಿದೆ.

ಈ ಯೋಜನೆಯು ನಮ್ಮ ರಕ್ಷಣಾ ಕೈಗಾರಿಕಾ ಸಹಭಾಗಿತ್ವದ ಆಳ ಮತ್ತು ಸ್ಥಿತಿಸ್ಥಾಪಕ ಉತ್ಪಾದನಾ ಸಾಮರ್ಥ್ಯವನ್ನು ನಿರ್ಮಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ವಿದೇಶಾಂಗ ಸಚಿವಎಸ್. ಜೈಶಂಕರ್ ತಿಳಿಸಿದ್ದಾರೆ.
ಈ ಮೆಗಾ ಯೋಜನೆಯಿಂದಾಗಿ ಭಾರತದ ಸಣ್ಣ ಮತ್ತು ಮಧ್ಯಮ ಗಾತ್ರದ ಸುಮಾರು 37 ಕೈಗಾರಿಕೆಗಳು ಪೂರೈಕೆದಾರರಾಗಿ ಕೈಜೋಡಿಸಿವೆ. ವಡೋದರಾ ಘಟಕವೊಂದರಲ್ಲೇ ನೇರವಾಗಿ 3,000 ಕ್ಕೂ ಹೆಚ್ಚು ತಾಂತ್ರಿಕ ಉದ್ಯೋಗಗಳು ಸೃಷ್ಟಿಯಾಗಲಿವೆ. ಬಿಡಿಭಾಗಗಳ ತಯಾರಿಕೆಯಿಂದ ಹಿಡಿದು ಇಂಜಿನ್ ಜೋಡಣೆ, ಪರೀಕ್ಷೆ ಮತ್ತು ನಿರ್ವಹಣೆಯನ್ನು ಟಾಟಾ ಸಂಸ್ಥೆಯೇ ನಿರ್ವಹಿಸುತ್ತಿರುವುದರಿಂದ, ಭವಿಷ್ಯದಲ್ಲಿ ಭಾರತವು ಈ ರಕ್ಷಣಾ ವಿಮಾನಗಳನ್ನು ವಿದೇಶಗಳಿಗೆ ರಫ್ತು ಮಾಡುವ ಜಾಗತಿಕ ಹಬ್ ಆಗಿ ಹೊರಹೊಮ್ಮುವ ಎಲ್ಲಾ ಸಾಧ್ಯತೆಗಳಿವೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ಅಡುಗೆ ಅನಿಲ, ಪೆಟ್ರೋಲ್-ಡೀಸೆಲ್ ದರ ಏರಿಕೆ ಖಂಡನೀಯ : ರುದ್ರಾಂಬಿಕ ಪಾಟೀಲ್ ಆಕ್ರೋಶ



**ಯಾದಗಿರಿ : ಮೇ.16:**ಕೇಂದ್ರ ಸರ್ಕಾರ ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ದರ ಹೆಚ್ಚಳ ಮಾಡಿರುವುದು ಸೇರಿದಂತೆ ಬಂಗಾರ ಖರೀದಿಯ ಮೇಲಿನ ಸುಂಕ ತೆರಿಗೆ ಏರಿಕೆ ಕ್ರಮವನ್ನು ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ರುದ್ರಾಂಬಿಕ ಪಾಟೀಲ್ ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಜನಸಾಮಾನ್ಯರು ಬಳಸುವ ಪ್ರತಿಯೊಂದು ಅಗತ್ಯ ವಸ್ತುಗಳ ಬೆಲೆಯನ್ನು ಏರಿಸುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಡ ಮತ್ತು ಮಧ್ಯಮ ವರ್ಗದ ಜನರ ಜೇಬಿಗೆ ಕತ್ತರಿ ಹಾಕುವ ಕೆಲಸ ಮಾಡುತ್ತಿವೆ ಎಂದು ಆರೋಪಿಸಿದರು.

ಅಡುಗೆ ಅನಿಲ ದರ ಏರಿಕೆಯಿಂದ ಮಹಿಳೆಯರ ಮೇಲಿನ ಆರ್ಥಿಕ ಹೊರೆ ಹೆಚ್ಚಾಗಿದ್ದು, ಅಕ್ಕಿ, ಬೇಳೆ ಸೇರಿದಂತೆ ದಿನಸಿ ವಸ್ತುಗಳ ಬೆಲೆ ಏರಿಕೆಯೂ ಜನಜೀವನವನ್ನು ಸಂಕಷ್ಟಕ್ಕೆ ದೂಡಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು. ಒಂದೆಡೆ ಉಚಿತ ಸಿಲಿಂಡರ್ ನೀಡುವ ಹೆಸರಿನಲ್ಲಿ ಪ್ರಚಾರ ಪಡೆಯುತ್ತಿರುವ ಸರ್ಕಾರ, ಮತ್ತೊಂದೆಡೆ ದರ ಏರಿಕೆಯ ಮೂಲಕ ಜನರಿಂದಲೇ ಹಣ ವಸೂಲಿ ಮಾಡುತ್ತಿರುವುದು ಖಂಡನೀಯ ಎಂದು ಹೇಳಿದರು.

"ಬಂಗಾರ ಖರೀದಿಸಬೇಡಿ, ಪೆಟ್ರೋಲ್-ಡೀಸೆಲ್ ಕಡಿಮೆ ಬಳಸಿ, ವಿದೇಶ ಪ್ರವಾಸ ಹೋಗಬೇಡಿ" ಎಂಬ ರೀತಿಯ ಹೇಳಿಕೆಗಳು ಜನರ ಸಂಕಷ್ಟವನ್ನು ಅರ್ಥಮಾಡಿಕೊಳ್ಳದ ಬಾಲಿಶ ಮನೋಭಾವವನ್ನು ತೋರಿಸುತ್ತವೆ ಎಂದು ಟೀಕಿಸಿದರು.

ಪೆಟ್ರೋಲ್ ಹಾಗೂ ಡೀಸೆಲ್ ದರ ಏರಿಕೆಯಿಂದ ಸಾರಿಗೆ ವೆಚ್ಚ ಹೆಚ್ಚಾಗಿ, ಅದರ ಪರಿಣಾಮವಾಗಿ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ಜನರು ತೀವ್ರ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದು, ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ ಎಂದು ಹೇಳಿದರು.

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ತಕ್ಷಣವೇ ದರ ಏರಿಕೆ ಕುರಿತು ಮರುಪರಿಶೀಲನೆ ನಡೆಸಿ, ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಹಾಗೂ ದಿನಬಳಕೆಯ ವಸ್ತುಗಳ ಬೆಲೆಯನ್ನು ಇಳಿಕೆ ಮಾಡಿ ಜನಸಾಮಾನ್ಯರಿಗೆ ನೆರವಾಗಬೇಕು ಎಂದು ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಮಹಿಳಾ ಘಟಕದ ಯಾದಗಿರಿ ಜಿಲ್ಲಾಧ್ಯಕ್ಷೆ ರುದ್ರಾಂಬಿಕ ಆರ್. ಪಾಟೀಲ್ ಚಟ್ನಳ್ಳಿ ಆಗ್ರಹಿಸಿದ್ದಾರೆ.

# ಹಳ್ಳಿ ಹಳ್ಳಿಗಳಲ್ಲಿ ಅಕ್ರಮ ಮದ್ಯದ ಅಟ್ಟಹಾಸ: ಪ್ರತಿಭಟನೆ

**ಜೇವರಗಿ,ಮೇ 16:** ಯಡ್ರಾಮಿ ತಾಲ್ಲೂಕಿನಾದ್ಯಂತ ಗ್ರಾಮೀಣ ಭಾಗಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟ ದಂಧೆಗೆ ತಕ್ಷಣವೇ ಕಡಿವಾಣ ಹಾಕಬೇಕೆಂದು ಆಗ್ರಹಿಸಿ, ಅಂಬೇಡ್ಕರ್ ಸೇವಾ ಸಮಿತಿಯಿಂದ ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು.ಬಳಿಕ ತಹಶೀಲ್ದಾರ್ ಮೂಲಕ ಅಬಕಾರಿಸಚಿವರಿಗೆ ಮನವಿ ಪತ್ರ ಸಲ್ಲಿಸಲಾಯಿತು.
ಸಂಘಟನೆಯ ಪ್ರಮುಖರಾದ ಮಲ್ಲಿಕಾರ್ಜುನ,ಪರಮಾನಂದ ಯೆಲಗೋಡುಸುರೇಶ್ ಗೆಜ್ಜೆ ಮಹೇಶ ಅಂಬರಖೆಡ್ ಸಿದ್ದನಗೌಡ ಯಂಕಂಚಿ ರವಿ ರಾಮುನೂರ್ ರಾಕೇಶ್ ಗಂಗಾಕರ್ ಸಿದ್ದು ಯಲಗೋಡ ಮೈಲಾರಿ ಗಂಗಾಕಾರಉಮೇಶ್ ನಾಗರಹಳ್ಳಿಸೋಮರಾಯ್ ಹೊಸಮನಿಗಿರೀಶ್ ಗುತ್ತೇದಾರ್ ಆಕಾಶ್ ಹಂಗರಗು ಕೆ. ಬಸವರಾಜ್ ಕಲಕೇರಿ, ಸೋಮಣ್ಣ ಹೊಸಮನಿ, ಗಂಗಕರ್, ಚಂದ್ರು ಶಿವಪುರು, ಮಹೇಶ್ ಅಂಬೆರಕೇಡ, ಸೂರ್ಯಕಾಂತ್ ದೊಡ್ಡಮನಿ, ಸಿದ್ದನಗೌಡ ಯಂಕಂಚಿ ಸೇರಿದಂತೆ ನೂರಾರು ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.




# ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ 'ಗಿರಿಜನ ಸಾಂಸ್ಕೃತಿಕ ಸಮಾಗಮ-2026' : ಜನಜಾತಿ ಸಂಸ್ಕೃತಿಯ ಐತಿಹಾಸಿಕ ಮಹಾಸಂಗಮಕ್ಕೆ ಸಜ್ಜು



**ಯಾದಗಿರಿ:ಮೇ.16:**ಗಿರಿಜನ ಸಮುದಾಯಗಳ ಸಾಂಸ್ಕೃತಿಕ ವೈಭವ, ಪರಂಪರೆ ಹಾಗೂ ರಾಷ್ಟ್ರೀಯ ಏಕತೆಯ ಸಂದೇಶವನ್ನು ದೇಶದ ಮುಂದೆ ಅನಾವರಣಗೊಳಿಸುವ ಉದ್ದೇಶದಿಂದ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಮೇ 24ರಂದು ನಡೆಯಲಿರುವ "ಜನಜಾತಿ ಸಾಂಸ್ಕೃತಿಕ ಸಮಾಗಮ-2026" ಕಾರ್ಯಕ್ರಮಕ್ಕೆ ಭರ್ಜರಿ ಸಿದ್ಧತೆಗಳು ಆರಂಭಗೊಂಡಿವೆ. ಗಿರಿಜನ ಸುರಕ್ಷಾ ವೇದಿಕೆ ಕರ್ನಾಟಕ, ಯಾದಗಿರಿ ಜಿಲ್ಲಾ ಘಟಕದ ವತಿಯಿಂದ ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದ್ದು, ದೇಶದ ಇತಿಹಾಸದಲ್ಲೇ ಅತಿದೊಡ್ಡ ಗಿರಿಜನ ಸಾಂಸ್ಕೃತಿಕ ಸಮಾವೇಶವೆಂದು ಬಣ್ಣಿಸಲಾಗಿದೆ.

ಮಹಾನ್ ಜನನಾಯಕ ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜಯಂತಿ ವರ್ಷದ ಅಂಗವಾಗಿ ಆಯೋಜನೆಯಾಗುತ್ತಿರುವ ಈ ಮಹಾಸಂಗಮದಲ್ಲಿ ದೇಶದ ವಿವಿಧ ರಾಜ್ಯಗಳ 500ಕ್ಕೂ ಹೆಚ್ಚು ಜನಜಾತಿ ಸಮುದಾಯಗಳಿಂದ ಒಂದೂವರೆ ಲಕ್ಷಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಗಿರಿಜನ ಸಮುದಾಯಗಳ ಸಾಂಸ್ಕೃತಿಕ ಅಸ್ತಿತ್ವ, ಧಾರ್ಮಿಕ ಪರಂಪರೆ ಹಾಗೂ ಸಾಮಾಜಿಕ ಮೌಲ್ಯಗಳನ್ನು ರಾಷ್ಟ್ರೀಯ ವೇದಿಕೆಯಲ್ಲಿ ಪರಿಚಯಿಸುವ ಅಪರೂಪದ ಅವಕಾಶ ಇದಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗಂಗಾಧರ ನಾಯಕ್ ತಿಂಥಣಿ, ರಾಜ್ಯ ಸಂಯೋಜಕರು, "ಜನಜಾತಿ ಸಮುದಾಯಗಳ ಐಕ್ಯತೆ, ಸಂಸ್ಕೃತಿ ಮತ್ತು ಪರಂಪರೆಯನ್ನು ದೇಶದ ಮುಂದೆ ಪ್ರದರ್ಶಿಸುವ ಅತ್ಯಂತ ಮಹತ್ವದ ವೇದಿಕೆಯಾಗಿ ಈ ಸಮಾಗಮ ರೂಪುಗೊಳ್ಳಲಿದೆ. ವಿಭಿನ್ನ ರಾಜ್ಯಗಳ ಗಿರಿಜನ ಸಮಾಜ ಒಂದೇ ವೇದಿಕೆಯಲ್ಲಿ ಸೇರುವ ಮೂಲಕ ಸಾಮಾಜಿಕ ಸಮರಸತೆ ಮತ್ತು ರಾಷ್ಟ್ರೀಯ ಏಕತೆಯ ಬಲವರ್ಧನೆ ಸಾಧ್ಯವಾಗಲಿದೆ" ಎಂದು ಹೇಳಿದರು.

ಯಾದಗಿರಿ ಜಿಲ್ಲೆಯಿಂದಲೇ 130ಕ್ಕೂ ಹೆಚ್ಚು ಗಿರಿಜನ ಸಮುದಾಯದ ಪ್ರತಿನಿಧಿಗಳು ಈ ಐತಿಹಾಸಿಕ ಸಮಾಗಮದಲ್ಲಿ ಭಾಗವಹಿಸಲಿದ್ದು, ಜಿಲ್ಲೆಯ ಜನಜಾತಿ ಸಂಸ್ಕೃತಿ ಮತ್ತು ಪರಂಪರೆಯನ್ನು ರಾಷ್ಟ್ರ ಮಟ್ಟದಲ್ಲಿ ಪರಿಚಯಿಸಲಿದ್ದಾರೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ದೆಹಲಿಯ ಐದು ವಿಭಿನ್ನ ಪ್ರದೇಶಗಳಿಂದ ಭವ್ಯ ಸಾಂಸ್ಕೃತಿಕ ಶೋಭಾಯಾತ್ರೆಗಳು ಆರಂಭವಾಗಲಿದ್ದು, ಜನಜಾತಿ ಸಮುದಾಯಗಳ ವೈವಿಧ್ಯಮಯ ವೇಷಭೂಷಣ, ಕಲಾ ಪರಂಪರೆ, ಜನಪದ ಸಂಸ್ಕೃತಿ ಹಾಗೂ ಜೀವನ ಶೈಲಿಯ ವೈಭವವನ್ನು ದೇಶದ ಮುಂದೆ ತೆರೆದಿಡಲಿವೆ. ಬಳಿಕ ಎಲ್ಲಾ ಶೋಭಾಯಾತ್ರೆಗಳು ಕೆಂಪುಕೋಟೆ ಆವರಣದಲ್ಲಿ ಒಂದಾಗಲಿದ್ದು, ಅಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಲಿದೆ.

ಸಭೆಯಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸುವ ಗಿರಿಜನ ಮುಖಂಡರು, ಚಿಂತಕರು, ಕಲಾವಿದರು ಹಾಗೂ ಸಮಾಜದ ಪ್ರತಿನಿಧಿಗಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ. ಇದೇ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವ ಒಟುಣ ಖುಚ್ಚು ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುವ ಸಾಧ್ಯತೆ ಇದೆ ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

"ವನವಾಸಿ, ಗ್ರಾಮವಾಸಿ, ನಗರವಾಸಿ ನಾವೆಲ್ಲರೂ ಭಾರತವಾಸಿಗಳು; ನಮ್ಮೆಲ್ಲರ ರಕ್ತ ಒಂದೇ" ಎಂಬ ಘೋಷವಾಕ್ಯದಡಿ ನಡೆಯಲಿರುವ ಈ ಸಮಾಗಮವು ರಾಷ್ಟ್ರೀಯ ಏಕತೆ, ಸಾಮಾಜಿಕ ಸಮರಸತೆ ಹಾಗೂ ಗಿರಿಜನರ ಸಾಂಸ್ಕೃತಿಕ ಗುರುತಿನ ಬಲವರ್ಧನೆಗೆ ಪ್ರಮುಖ ವೇದಿಕೆಯಾಗಲಿದೆ.

ಕಾರ್ಯಕ್ರಮದ ಅಂಗವಾಗಿ ಪಾರಂಪರಿಕ ಕಲಾ ಪ್ರದರ್ಶನಗಳು, ಜನಪದ ಆಚರಣೆಗಳು, ಸಾಂಸ್ಕೃತಿಕ ವೈಭವದ ಮೆರವಣಿಗೆಗಳು ಹಾಗೂ ಸಮುದಾಯ ಸಹಭಾಗಿತ್ವದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ದೆಹಲಿಯಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ವಾತಾವರಣ ನಿರ್ಮಾಣವಾಗಲಿದೆ.

ಲಕ್ಷಾಂತರ ಗಿರಿಜನ ಬಂಧುಗಳ ಆಗಮನದ ಹಿನ್ನೆಲೆಯಲ್ಲಿ ವಸತಿ, ಆಹಾರ, ಕುಡಿಯುವ ನೀರು, ವೈದ್ಯಕೀಯ ನೆರವು, ಸಾರಿಗೆ ಹಾಗೂ ಸ್ವಚ್ಛತಾ ವ್ಯವಸ್ಥೆಗಳ ಸಮರ್ಪಕ ನಿರ್ವಹಣೆಗೆ 20ಕ್ಕೂ ಹೆಚ್ಚು ವಿಭಾಗಗಳು ಹಾಗೂ ವಿವಿಧ ಸಮಿತಿಗಳನ್ನು ರಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಈ ಸಂದರ್ಭದಲ್ಲಿ ಯಂಕಪ್ಪ ಮಾಕಸಿ ಹೇಮನೂರು, ರಾಜಾ ಪಿಡ್ಡ ನಾಯಕ್, ಕಾಶಪ್ಪ ದೊರೆ ಅಬ್ಬೆತುಮಕೂರು, ಭೀಮಾಶಂಕರ ಮೇಟಿ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಭಾರತ-ಯುಎಇ ತೈಲ ಸಹಭಾಗಿತ್ವ



**ಅಬುಧಾಬಿ.ಮೇ. 16–** ಭಾರತದ ಇಂಧನ ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ಮಹತ್ವದ ಹೆಜ್ಜೆಯಾಗಿ, ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಭಾರತದಲ್ಲಿನ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್‌ನಲ್ಲಿ 30 ದಶಲಕ್ಷ ಬ್ಯಾರೆಲ್ ಕಚ್ಚಾ ತೈಲ ಸಂಗ್ರಹಿಸಲು ಒಪ್ಪಿಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಬುಧಾಬಿ ಭೇಟಿಯ ವೇಳೆ ಈ ಮಹತ್ವದ ಒಪ್ಪಂದಕ್ಕೆ ಅಂತಿಮ ರೂಪ ನೀಡಲಾಗಿದೆ.

ಪ್ರಧಾನಿ ಮೋದಿ ಹಾಗೂ ಯುಎಇ ಅಧ್ಯಕ್ಷ ಶೇಕ್ ಮಹಮದ್ ಬಿನ್ ಜಿಯಾದ್ ಅಲ್ ನಯಾನ್ ನಡುವೆ ನಡೆದ ಉನ್ನತ ಮಟ್ಟದ ಮಾತುಕತೆಯಲ್ಲಿ ಇಂಧನ ಸಹಭಾಗಿತ್ವವನ್ನು ಇನ್ನಷ್ಟು ವಿಸ್ತರಿಸುವ ಬಗ್ಗೆ ಒಮ್ಮತ ವ್ಯಕ್ತವಾಯಿತು.

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ, ಇಂಡಿಯನ್ ವ್ಯೂಹಾತ್ಮಕ ಸಹಯೋಗ ಪೆಟ್ರೋಲಿಯಂ ರಿಸರ್ವ್ಸ್ ಲಿಮಿಟೆಡ್ ಮತ್ತು ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ ನಡುವೆ ನಡೆದ ವ್ಯೂಹಾತ್ಮಕ ಸಹಯೋಗ ಒಪ್ಪಂದ'ವನ್ನು ಎರಡೂ ದೇಶಗಳ ನಾಯಕರು ಸ್ವಾಗತಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿ ಮತ್ತು ಜಾಗತಿಕ ತೈಲ ಮಾರುಕಟ್ಟೆಯ ಅಸ್ಥಿರತೆಯ ನಡುವೆ ಈ ಒಪ್ಪಂದವು ಭಾರತದ ಇಂಧನ ಭದ್ರತೆಗೆ ದೊಡ್ಡ ಬಲ ನೀಡಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಇದರ ಜೊತೆಗೆ, ಭಾರತದಲ್ಲಿ ತಂತ್ರಾತ್ಮಕ ಅನಿಲ ಸಂಗ್ರಹಣಾ ವ್ಯವಸ್ಥೆ ಸ್ಥಾಪನೆ ಕುರಿತು ಉಭಯ ರಾಷ್ಟ್ರಗಳು ಸಹಕಾರ ನೀಡಲು ನಿರ್ಧರಿಸಿವೆ. ಇಂಡಿಯನ್ ಆಯಿಲ್ ಕಾರ್ಪೊರೇಶನ್ ಹಾಗೂ ಯುಎಇ ನಡುವೆ ದೀರ್ಘಾವಧಿಯ ಎಲ್‌ಪಿಜಿ ಪೂರೈಕೆ ಒಪ್ಪಂದಕ್ಕೂ ಸ್ವಾಗತ ಸೂಚಿಸಲಾಗಿದೆ.

"ಭಾರತದ ಇಂಧನ ಭದ್ರತೆಯಲ್ಲಿ ಯುಎಇ ಪ್ರಮುಖ ಪಾಲುದಾರ" ಎಂದು ಎಂಇಎ ಹೇಳಿದ್ದು, ಕಚ್ಚಾ ತೈಲ, ಎಲ್‌ಎನ್‌ಜಿ ಹಾಗೂ ಎಲ್‌ಪಿಜಿ ಪೂರೈಕೆ ಸೇರಿದಂತೆ ಸಮಗ್ರ ಇಂಧನ ಸಹಭಾಗಿತ್ವಕ್ಕಾಗಿ ಹೊಸ ಯೋಜನೆಗಳನ್ನು ಜಾರಿಗೆ ತರಲು ಎರಡೂ ರಾಷ್ಟ್ರಗಳು ಒಪ್ಪಿಕೊಂಡಿವೆ ಎಂದು ತಿಳಿಸಿದೆ.

ಇಂಧನ ಕ್ಷೇತ್ರದ ಹೊರತಾಗಿ ಬ್ಯಾಂಕಿಂಗ್, ಮೂಲಸೌಕರ್ಯ ಮತ್ತು ಹಣಕಾಸು ಕ್ಷೇತ್ರಗಳಲ್ಲಿ ಭಾರತಕ್ಕೆ 5 ಶತಕೋಟಿ ಡಾಲರ್ ಹೂಡಿಕೆ ಘೋಷಣೆಯೂ ನಡೆದಿದೆ. ರಕ್ಷಣಾ ಸಹಕಾರ, ಸಮುದ್ರ ಮಾರ್ಗಗಳ ಭದ್ರತೆ, ಹಡಗು ನಿರ್ಮಾಣ ಹಾಗೂ ಆಧುನಿಕ ಗಣಕ ತಂತ್ರಜ್ಞಾನ ಕ್ಷೇತ್ರಗಳಲ್ಲಿಯೂ ಹೊಸ ಒಪ್ಪಂದಗಳು ಸೇರಿವೆ.

ಇದೇ ವೇಳೆ, ಪಶ್ಚಿಮ ಏಷ್ಯಾದಲ್ಲಿನ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಯ ಹಿನ್ನೆಲೆ, ಹೊರ್ಮುಜ್ ಜಲಸಂಧಿಯ ಮೂಲಕ ಸುರಕ್ಷಿತ ನೌಕಾಯಾನ ಮತ್ತು ವ್ಯಾಪಾರ ಮಾರ್ಗಗಳ ನಿರಂತರ ಸಂಚಾರದ ಅಗತ್ಯತೆಯನ್ನು ಎರಡೂ ದೇಶಗಳು ಒತ್ತಿಹೇಳಿವೆ.

# ಸಮಸ್ಯೆಗಳನ್ನು ಆಲಿಸಿ ಸೂಕ್ತ ಪರಿಹಾರ ನೀಡುವುದೆ ಸಭೆಯ ಉದ್ದೇಶ

**ಸೈದಾಪುರ:ಮೇ.16:** ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಮೇಲಾಗುವ ದೌರ್ಜನ್ಯಗಳನ್ನು, ಆರ್ಥಿಕ, ಸಾಮಾಜಿಕ ಸಮಸ್ಯೆಗಳನ್ನು ಆಲಿಸಿ ಸೂಕ್ತ ಪರಿಹಾರ ನೀಡುವುದೆ ಸಭೆಯ ಪ್ರಮುಖ ಉದ್ದೇಶವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ ಅಭಿಪ್ರಾಯಪಟ್ಟರು.



ಪಟ್ಟಣದ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಂದು ಕೊರತೆಗಳ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿನ ದಲಿತರ ಮೇಲಾಗುವ ದೌರ್ಜನ್ಯಗಳನ್ನು ತಡೆಯಲು ಪ್ರತಿ ತಿಂಗಳಿಗೊಮ್ಮೆ ಜನರ ಬಳಿ ನೇರವಾಗಿ ಹೋಗಿ ಅವರ ಕುಂದು ಕೊರತೆಗಳನ್ನು ಆಲಿಸಿ ನಿಯಮಿತವಾಗಿ ಪರಿಹಾರ ನೀಡುವುದೆ ಸಭೆಯ ಮೂಲ ಉದ್ದೇಶವಾಗಿದೆ. ಅದರಂತೆ ನಿಮ್ಮ ನಿಮ್ಮ ಗ್ರಾಮಗಳಲ್ಲಿನ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮಸ್ಯೆಗಳನ್ನು ನಮಗೆ ತಿಳಿಸಿದರೆ ನಾವು ಸಂಬಂಧಿಸಿದ ಇಲಾಖೆಯ ಗಮನಕ್ಕೆ ತಂದು ತಕ್ಷಣವೇ ಸ್ಪಂದಿಸಿ ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡುವುದು ಮತ್ತು ಕಾನೂನು ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದು. ಪ್ರತಿಯೊಬ್ಬರು ಇಂತಹ ಸಭೆಯಲ್ಲಿ ಭಾಗವಹಿಸಿ ನಿಮ್ಮಲ್ಲಿನ ವಾಸ್ತವ ಸ್ಥಿತಿಗತಿಯನ್ನು ಮತ್ತು ಸಮಸ್ಯೆಗಳನ್ನು ಹೇಳಿ ಪರಿಹಾರವನ್ನು ಕಂಡುಕೊಳ್ಳುವುದರ ಜೊತೆಗೆ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.
ದೌರ್ಜನ್ಯ ಸಲಹಾ ಸಮಿತಿಯ ಸದಸ್ಯ ಮರೆಪ್ಪ ಚಟ್ಟೇರಕರ್ ಮಾತನಾಡಿದರು. ಇದಕ್ಕೂ ಮೊದಲು ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣಗಳ ಪರಿಶೀಲನೆ, ಜಮೀನು ಸಮಸ್ಯೆಗಳು, ಅಂಬೇಡ್ಕರ್ ಭವನ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.
ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕ ಚೆನ್ನಬಸಪ್ಪ, ಡಿವೈಎಸ್ಪಿ ಸುರೇಶ, ಪಿಐ ರಾಜಶೇಖರ ಹಳಿಗೇರಾ, ಶಿವಾನಂದ ಎಂ.ಮರಡಿ, ಪಿಎಸ್ಐ ಭೀಮರಾಯ ಕೂಡ್ಲೂರು, ಪೇದೆ ರಾಜಕುಮಾರ್ , ಕಂದಾಯ ಇಲಾಖೆಯ ಉಪ ತಹಶೀಲ್ದಾರ್ ದಸ್ತಗಿರಿ ನಾಯಕ, ಪಿಡಿಓ ವಿಜಯಲಕ್ಷ್ಮೀ ಸೇರಿದಂತೆ ವಿವಿಧ ಗ್ರಾಮಗಳ ಸಾರ್ವಜನಿಕರು ಉಪಸ್ಥಿತರಿದ್ದರು.

## ಬೆಲೆ ಏರಿಕೆ ತಕ್ಷಣ ಹಿಂಪಡೆಯಬೇಕು ಆಪ್ ಮುಖಂಡರ ಒತ್ತಾಯಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ದರ ಏರಿಕೆ ಖಂಡಿಸಿ ಪ್ರಧಾನ ಮಂತ್ರಿಗಳಿಗೆ ಮನವಿ




**ಬೀದರ:ಮೇ.16:**ಕೇಂದ್ರ ಸರ್ಕಾರವು ಪಂಚರಾಜ್ಯಗಳ ಚುನಾವಣೆ ಮುಗಿದ ತಕ್ಷಣ ಪೆಟ್ರೋಲ್ ಹಾಗೂ ಡೀಸೆಲ್ ದರವನ್ನು ಪ್ರತಿ ಲೀಟರ್‌ಗೆ ರೂ.3ರಷ್ಟು ಹೆಚ್ಚಿಸಿರುವುದನ್ನು ಖಂಡಿಸಿ ಆಮ್ ಆದ್ಮಿ ಪಾರ್ಟಿ ಕರ್ನಾಟಕದ ಬೀದರ ಜಿಲ್ಲಾ ಘಟಕ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಭಾರತದ ಪ್ರಧಾನ ಮಂತ್ರಿಗಳಿಗೆ ಅವರಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಸಲ್ಲಿಸಿದ ಪಕ್ಷದ ಮುಖಂಡರು, ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿರುವ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಇಂಧನ ದರ ಏರಿಕೆ ಮತ್ತೊಂದು ದೊಡ್ಡ ಹೊಡೆತವಾಗಿದೆ ಎಂದು ಆರೋಪಿಸಿದರು.

ಅಡುಗೆ ಅನಿಲದ ಬೆಲೆ ಹೆಚ್ಚಳದಿಂದ ಮನೆಮಂದಿಯ ಜೀವನ ಅಸ್ತವ್ಯಸ್ತವಾಗಿದ್ದು, ಕುಟುಂಬಗಳ ನಿರ್ವಹಣೆ ಕಷ್ಟಕರವಾಗಿದೆ. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹೋಟೆಲ್ ಉದ್ಯಮ ಕೂಡ ಸಂಕಷ್ಟಕ್ಕೆ ಸಿಲುಕಿದ್ದು, ಅನೇಕ ಸಣ್ಣ ವ್ಯಾಪಾರಿಗಳು ನಷ್ಟ ಅನುಭವಿಸುತ್ತಿದ್ದಾರೆ. ದಿನನಿತ್ಯದ ಖರ್ಚು ಹೆಚ್ಚಾಗಿ ಸಾಮಾನ್ಯ ಜನರು ಬದುಕು ಸಾಗಿಸುವುದೇ ಕಷ್ಟಕರವಾಗಿದೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.ಕೇಂದ್ರ ಸರ್ಕಾರವು ಜನಸಾಮಾನ್ಯರ ಸಂಕಷ್ಟವನ್ನು ಮನಗಂಡು ತಕ್ಷಣವೇ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ದರವನ್ನು ನಿಯಂತ್ರಿಸಿ ಜನರಿಗೆ ಪರಿಹಾರ ನೀಡಬೇಕು. ಜೊತೆಗೆ ಇಂಧನದ ಮೇಲಿನ ತೆರಿಗೆ ಕಡಿತಗೊಳಿಸಿ ಬೆಲೆ ಇಳಿಕೆಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾಧ್ಯಕ್ಷರಾದ ಸಿದ್ದು ಫೂಲಾರಿ, ಉಪಧ್ಯಕ್ಷರಾದ ರಾಜಕುಮಾರ ಎನ್. ಪಾಟೀಲ ಬಾವಗಿ, ಎಂ.ಡಿ. ಜಾವೀದ್ (ಪ್ರಧಾನ ಕಾರ್ಯದರ್ಶಿ), ವೆಂಕಟರಾವ್ ಹಿಂಡಾ, ನಂದಿ ಬಸವ ಪಾಟೀಲ, ಡಿ.ಕೆ. ಯೋಹಾನ್, ಕಾಂಟೇಪ್ಪಾ ಗುಪ್ತಾ ಹಾಗೂ ಓಂಕಾರ್ ಉಪಸ್ಥಿತರಿದ್ದರು

# ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ: ತಹಶೀಲ್ದಾರ್ ಸುರೇಶ ವರ್ಮಾ

**ರಾಯಚೂರು ಮೇ.16**: ಭಾರತ ಚುನಾವಣಾ ಆಯೋಗ ನವದೆಹಲಿ ವತಿಯಿಂದ ಕರ್ನಾಟಕ ಸೇರಿದಂತೆ 16 ರಾಜ್ಯಗಳು ಹಾಗೂ 03 ಕೇಂದ್ರಾಡಳಿತ ಪ್ರದೇಶಗಳಲ್ಲಿ ಹಂತ ಹಂತವಾಗಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್.ಐ.ಆರ್) ನಡೆಸಲು ನಿರ್ದೇಶನ ನೀಡಲಾಗಿದೆ ಎಂದು 53 ಹಾಗೂ 54ನೇ ವಿಧಾನ ಸಭಾ ಕ್ಷೇತದ ಸಹಾಯಕ ಮತದಾರರ ನೋಂದಣಾಧಿಕಾರಿಗಳು ಆಗಿರುವ ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ ಅವರು ತಿಳಿಸಿದ್ದಾರೆ.

ಜನಗಣತಿಯ ಗೃಹಪಟ್ಟಿ ಕಾರ್ಯನಡೆಯುತ್ತಿರುವ ಹಿನ್ನೆಲೆಯಲ್ಲಿ ಸಾಮಾನ್ಯ ಕ್ಷೇತ್ರಯಂತ್ರಾಂಗದ ಲಭ್ಯತೆಯನ್ನು ಪರಿಗಣಿಸಿ ಎಸ್‌ಐಆರ್ ಹಂತ–3ರ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ.

ಎಸ್‌ಐಆರ್ ಹಂತ–3ರ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಸುಮಾರು 59,050 ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒಎಸ್) ಮನೆ ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿಯನ್ನು ಸಂಗ್ರಹಿಸಲಿದ್ದು, ರಾಜಕೀಯ ಪಕ್ಷಗಳಿಂದ ನೇಮಕಗೊಂಡಿರುವ 25,284 ಬೂತ್ ಮಟ್ಟದ ಏಜೆಂಟರಗಳು (ಬಿಎಲ್‌ಒಎಸ್) ಅವರಿಗೆ ಸಹಕಾರ ನೀಡಲಿದ್ದು, ರಾಯಚೂರು ತಾಲ್ಲೂಕಿನ ಎಲ್ಲಾ ಮತದಾರರು ಈ ಪಕ್ರಿಯೆಯಲ್ಲಿ ಸಹಕರಿಸುವಂತೆ ಕೋರಲಾಗಿದೆ.

ಅರ್ಹತಾ ದಿನಾಂಕ: 01–10–2026, ತರಬೇತಿ ಮತ್ತು ಮುದ್ರಣ ಸಿದ್ದತೆ ದಿನಾಂಕ: 20–06–2026ರಿಂದ ದಿನಾಂಕ: 29–06–2026ರವರೆಗೆ ನಡೆಸಲಾಗುವುದು. ದಿನಾಂಕ:30–06–2026ರಿಂದ ದಿನಾಂಕ: 29–07–2026ರವರೆಗೆ ಬಿಎಲ್‌ಒಎಸ್ ರಿಂದ ಮನೆ ಮನೆ ಭೇಟಿ ನೀಡಲಿದ್ದಾರೆ. ದಿನಾಂಕ: 29–07–2026ರೊಳಗೆ ಮತಗಟ್ಟೆಗಳ ತರ್ಕಬದ್ಧಗೊಳಿಸುವಿಕೆ, ದಿನಾಂಕ: 05–08–2026ರಂದು ಕರಡು ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುವುದು. ದಿನಾಂಕ:05–08–2026 ರಿಂದ ದಿನಾಂಕ: 04–09–2026ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಕಾಶ ನೀಡಲಾಗಿದೆ. ದಿನಾಂಕ: 07–10–2026ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುವುದು.

ರಾಜ್ಯದಲ್ಲಿ ಬಿಎಲ್‌ಒ 59,050, ಬಿಎಲ್‌ಎ 25,284 ಹಾಗೂ ಒಟ್ಟು 5,55,74,064 ಮತದಾರರು ಹೊಂದಲಾಗಿದ್ದು, ರಾಯಚೂರು ತಾಲ್ಲೂಕಿನ ಎಲ್ಲಾ ಮತದಾರರು ಬೂತ್ ಮಟ್ಟದ ಅಧಿಕಾರಿಗಳು ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ಸಹಕರಿಸಿ, ತಮ್ಮ ಹೆಸರು, ವಿಳಾಸ ಹಾಗೂ ಇತರ ವಿವರಗಳು ಮತದಾರರ ಪಟ್ಟಿಯಲ್ಲಿ ಸರಿಯಾಗಿ ನಮೂದಾಗಿರುವುದನ್ನು ಖಚಿತಪಡಿಸಿಕೊಳ್ಳುವಂತೆ 53 ಹಾಗೂ 54 ವಿಧಾನ ಸಭಾ ಕ್ಷೇತದ ಸಹಾಯಕ ಮತದಾರರ ನೋಂದಣಾಧಿಕಾರಿಗಳು ಆಗಿರುವ ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಎನ್ ಡಿ ಇಂಜಿನೊಯರಿಂಗ್ ಕಾಲೇಜಿನಲ್ಲಿ ರಾಷ್ಟ್ರೀಯ ಸಮ್ಮೇಳನ ಅಂತ್ಯ




**ಬೀದರ್: ಮೇ.16:**ನಗರದ ಗುರುನಾನಕ ದೇವ ಮಜಿನಿಯರಿಂಗ್ ಕಾಲೇಜನಲ್ಲಿ ಮೇ 15 ಮತ್ತು 16, 2026 ರಂದು "ಎಮರ್ಜಿಂಗ್ ಟ್ರೆಂಡ್ಸ್ ಇನ್ ಎಂಜಿನಿಯರಿಂಗ್, ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್ (ಓಆಇಖಇಖಿಒ–2026)" ರಾಷ್ಟ್ರೀಯ ಸಮ್ಮೇಳನವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.
ಈ ಸಮ್ಮೇಳನವನ್ನು ಸಿವಿಲ್, ಇಲೆಕ್ಟಾನಿಕ್ಸ್ & ಕಮ್ಯುನಿಕೇಶನ್, ಎಲೆಕ್ಟ್ರಿಕಲ್, ಮೆಕ್ಯಾನಿಕಲ್, ಎಂಬಿಎ ಮತ್ತು ಎಂಸಿಎ ವಿಭಾಗಗಳು ಸಂಯುಕ್ತವಾಗಿ ಆಯೋಜಿಸಿದ್ದವು.
ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಪ್ರಾಧ್ಯಾಪಕರು, ಸಂಶೋಧಕರು, ಕೈಗಾರಿಕಾ ತಜ್ಞರು ಹಾಗೂ ವಿದ್ಯಾರ್ಥಿಗಳಿಂದ 125ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ಸಲ್ಲಿಕೆಯಾಗಿದ್ದು, ಸಮ್ಮೇಳನಕ್ಕೆ ಭಾರೀ ಪ್ರತಿಕ್ರಿಯೆ ವ್ಯಕ್ತವಾಯಿತು.
ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಡಾ.ಶ್ರೀನಿವಾಸ ಎಸ್ ಮೇತನ ಹಾಗೂಡಾ.ಕಡಲಿ ಶ್ರೀನಿವಾಸ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ವೀಣಾ ಎಸ್ ಸೋರಗಾನ್ವಿ ವಹಿಸಿದ್ದರು. ಇದೇ ಸಂದರ್ಭದಲ್ಲಿ ಡಾ.ಧನಂಜಯ ಎಂ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.
ಈ ಸಮ್ಮೇಳನವನ್ನು ಗುರುನಾನಕ್ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿದ್ದು, ಆಡಿ. ಃಚಿಟಭುಡಿ ಖುಟಿರ್ಝು ಅಧ್ಯಕ್ಷರು ಹಾಗೂ ಆಡಿ. ಖಝುಟಚಿ ಏಚಿಣಾಡಿ ಉಪಾಧ್ಯಕ್ಷರು ಸಂಸ್ಥೆಯ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದರು.
ಸಮ್ಮೇಳನದ ಸಂಯೋಜಕರಾಗಿ ಡಾ.ಬಲಬೀರ ಸಿಂಗ್ ಹಾಗೂ ಡಾ.ರೇಷ್ಮಾ ಕೌರ್ ಕಾರ್ಯನಿರ್ವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಪ್ರಮುಖ ಪಾತ್ರವಹಿಸಿದರು.
ಸಮ್ಮೇಳನದಲ್ಲಿ ಸ್ಮಾರ್ಟ್ ಸಿಟಿ ಯೋಜನೆ, ಸುಸ್ಥಿರ ಮೂಲಸೌಕರ್ಯ, ತ್ಯಾಜ್ಯ ನಿರ್ವಹಣೆ, ಜಿಯೋಪಾಲಿಮರ್ ಕಾಂಕ್ರೀಟ್, ಕೃತಕ ಬುದ್ಧಿಮತ್ತೆ (ಂಖ), ಐಒಟಿ ಅನ್ವಯಗಳು, ಸ್ಮಾರ್ಟ್ ಕೃಷಿ, ಆರೋಗ್ಯ ವ್ಯವಸ್ಥೆಗಳು, ಎಡ್ಜ್ ಕಂಪ್ಯೂಟಿಂಗ್, ನವೀಕರಿಸಬಹುದಾದ ಇಂಧನ, ಎಲೆಕ್ಟ್ರಿಕ್ ವಾಹನಗಳು, ಸೈಬರ್ ಭದ್ರತೆ, ರೋಬೋಟಿಕ್ಸ್, ಇಂಡಸ್ಟ್ರಿ 4.0, ಫಿನ್‌ಟೆಕ್ ಮತ್ತು ಂಖ ಆಧಾರಿತ ವ್ಯವಹಾರ ಪರಿವರ್ತನೆ ಸೇರಿದಂತೆ ಅನೇಕ ಸಮಕಾಲೀನ ವಿಷಯಗಳ ಕುರಿತು ತಾಂತ್ರಿಕ ಉಪನ್ಯಾಸಗಳು ಹಾಗೂ ಸಂಶೋಧನಾ ಪ್ರಬಂಧ ಮಂಡನೆಗಳು ನಡೆದವು.
ಸಮ್ಮೇಳನದ ಸಮಾರೋಪದಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಆಯ್ಕೆಯಾದ ಸಂಶೋಧಕರಿಗೆ "ಬೆಸ್ಟ್ ಪೇಪರ್ ಅವಾರ್ಡ್" ನೀಡಿ ಗೌರವಿಸಲಾಯಿತು.
ಈ ರಾಷ್ಟ್ರೀಯ ಸಮ್ಮೇಳನವು ವಿವಿಧ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕ್ಷೇತ್ರಗಳ ಸಂಶೋಧಕರು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ಜ್ಞಾನ ಹಂಚಿಕೆ, ಸಂಶೋಧನಾ ಸಹಯೋಗ ಮತ್ತು ಶೈಕ್ಷಣಿಕ ಸಂವಾದಕ್ಕೆ ಉತ್ತಮ ವೇದಿಕೆಯಾಗಿದ್ದು, ಸಂಸ್ಥೆಯ ಶೈಕ್ಷಣಿಕ ಹಾಗೂ ಸಂಶೋಧನಾ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿತು.

# ಅಂಚೆ ಇಲಾಖೆಯಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಗೆ ಉತ್ತೇಜಿನ


**ರಾಯಚೂರು ಮೇ.16:**ಸಾರ್ವಜನಿಕರ ಸೌಲಭ್ಯ ಹಾಗೂ ವೇಗವಾದ ಸೇವೆಯನ್ನು ಗಮನದಲ್ಲಿಟ್ಟುಕೊಂಡು ಅಂಚೆ ಇಲಾಖೆ ವತಿಯಿಂದ ಅಂಚೆ ಕಚೇರಿಗಳಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಉತ್ತೇಜಿಸಲಾಗುತ್ತಿದೆ ಎಂದು ಅಂಚೆ ಇಲಾಖೆಯ ರಾಯಚೂರು ವಿಭಾಗದ ಅಧೀಕ್ಷಕರು ತಿಳಿಸಿದ್ದಾರೆ.

ಅಂಚೆ ಸೇವೆಗಳಾದ ಮನಿ ಆರ್ಡರ್, ಸ್ಪೀಡ್ ಪೋಸ್ಟ್ ಮತ್ತು ಪಾರ್ಸೆಲ್ ಬುಕಿಂಗ್, ಅಂಚೆ ಜೀವ ವಿಮೆ ಪ್ರೀಮಿಯಂ ಪಾವತಿ ಹಾಗೂ ಇತರೆ ಸೇವೆಗಳಿಗಾಗಿ ಸಾರ್ವಜನಿಕರು ಯುಪಿಐ, ಕ್ಯೂಆರ್ ಕೋಡ್, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಹಾಗೂ ಮೊಬೈಲ್ ಬ್ಯಾಂಕಿಂಗ್ ಮೂಲಕ ಡಿಜಿಟಲ್ ಪಾವತಿಯನ್ನು ಬಳಸುವಂತೆ ಕೋರಲಾಗಿದೆ.

ಡಿಜಿಟಲ್ ಪಾವತಿಯಿಂದ ನಗದು ವ್ಯವಹಾರಗಳ ಅವಶ್ಯಕತೆ ಕಡಿಮೆಯಾಗುವುದರೊಂದಿಗೆ ವ್ಯವಹಾರಗಳು ಸುರಕ್ಷಿತ, ಸುಲಭ ಹಾಗೂ ಪಾರದರ್ಶಕವಾಗುತ್ತವೆ. ಜೊತೆಗೆ ಸಾರ್ವಜನಿಕರಿಗೆ ಸಮಯ ಉಳಿತಾಯವಾಗುವುದರೊಂದಿಗೆ ತ್ವರಿತ ಸೇವೆ ದೊರೆಯಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಡಿಜಿಟಲ್ ಪಾವತಿ ವಿಧಾನಗಳನ್ನು ಬಳಸಿಕೊಂಡು ಅಂಚೆ ಇಲಾಖೆಯ ಡಿಜಿಟಲ್ ಸೇವೆಗಳಿಗೆ ಸಹಕರಿಸುವಂತೆ ಅಂಚೆ ಇಲಾಖೆಯ ರಾಯಚೂರು ವಿಭಾಗದ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೀಟ್' ರದ್ದತಿಗೆ ಆಗ್ರಹ

**ಬೆಂಗಳೂರು.ಮೇ16:** ದೇಶಾದ್ಯಂತ ತೀವ್ರ ವಿವಾದ ಹಾಗೂ ಅಕ್ರಮಗಳ ಆರೋಪಕ್ಕೆ ಗುರಿಯಾಗಿರುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ ಯನ್ನು 2026ನೇ ಸಾಲಿನಿಂದ ಸಂಪೂರ್ಣವಾಗಿ ರದ್ದುಪಡಿಸಬೇಕು ಎಂದು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.



ಈ ಸಂಬಂಧ ಡಾ,ಶರಣಪ್ರಕಾಶ್ ಪಾಟೀಲ್ ಕೇಂದ್ರಕ್ಕೆ ಪತ್ರ ಬರೆದಿದ್ದು ವೈದ್ಯಕೀಯ ಶಿಕ್ಷಣ ಪ್ರವೇಶಾತಿಗಾಗಿ ರಾಜ್ಯಗಳಿಗೆ ತಮ್ಮದೇ ಆದ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲು ಕಾನೂನಾತ್ಮಕ ಅವಕಾಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಕರ್ನಾಟಕದಲ್ಲಿ ಈ ಹಿಂದೆ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಿಇಟಿ ವ್ಯವಸ್ಥೆಯನ್ನು ಪುನಃ ಜಾರಿಗೆ ತರಲು ಅನುಮತಿ ನೀಡಬೇಕೆಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಶಕಗಳಿಂದ ಅತ್ಯಂತ ಪಾರದರ್ಶಕ, ನ್ಯಾಯಸಮ್ಮತ ಹಾಗೂ ಶಿಸ್ತಿನ ರೀತಿಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಗಳನ್ನು ನಡೆಸಿಕೊಂಡು ಬಂದ ಇತಿಹಾಸವನ್ನು ಹೊಂದಿದೆ. ರಾಜ್ಯದ ಹಳೆಯ ಸಿಇಟಿ ವ್ಯವಸ್ಥೆಯು ಗ್ರಾಮೀಣ ಭಾಗದ, ಮಧ್ಯಮ ವರ್ಗದ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಮಾನ ಅವಕಾಶಗಳನ್ನು ಒದಗಿಸುವಲ್ಲಿ ಯಶಸ್ವಿಯಾಗಿತ್ತು. ಇದು ಕೇವಲ ಪರೀಕ್ಷೆಯಾಗಿರದೆ, ಶುದ್ಧ ಪ್ರತಿಭೆ ಮತ್ತು ಪರಿಶ್ರಮ ನಂಬಿದ ಯುವಜನರ ಭವಿಷ್ಯ ರೂಪಿಸಿದ ಅತ್ಯಂತ ವಿಶ್ವಾಸಾರ್ಹ ಮಾದರಿಯಾಗಿತ್ತು ಎಂದು ಸರ್ಕಾರ ಪ್ರತಿಪಾದಿಸಿದೆ. ಕಳೆದ ಕೆಲವು ವರ್ಷಗಳಿಂದ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುತ್ತಿರುವ 'ನೀಟ್' ಪರೀಕ್ಷೆಯ ಸುತ್ತ ಗಂಭೀರ ಆತಂಕಗಳು ಸೃಷ್ಟಿಯಾಗಿವೆ ಎಂದು ತಿಳಿಸಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ನಕಲಿ ಅಭ್ಯರ್ಥಿಗಳ ಹಾವಳಿ

ಸಂಘಟಿತ ಅಕ್ರಮ ಜಾಲಗಳು ಮತ್ತು ಅಂಕಗಳ ತಿರುಚುವಿಕೆ ತಾಂತ್ರಿಕ ದೋಷಗಳು ಹಾಗೂ ಪರೀಕ್ಷಾ ಪ್ರಕ್ರಿಯೆಯಲ್ಲಿನ ನಿರಂತರ ಅವ್ಯವಸ್ಥೆ.ಈ ಎಲ್ಲಾ ಲೋಪಗಳು ರಾಷ್ಟ್ರಮಟ್ಟದ ಪ್ರಮುಖ ಪರೀಕ್ಷೆಯೊಂದರ ವಿಶ್ವಾಸಾರ್ಹತೆಯ ಮೇಲೆ ಭಾರಿ ಪ್ರಶ್ನಾರ್ಥಕ ಚಿಹ್ನೆಯನ್ನು ಮೂಡಿಸಿವೆ. ಇತ್ತೀಚಿನ ವಿವಾದಗಳು ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ತೀವ್ರ ಮಾನಸಿಕ ಒತ್ತಡ, ಆತಂಕ ಮತ್ತು ಭವಿಷ್ಯದ ಬಗ್ಗೆ ಅನಿಶ್ಚಿತತೆಯನ್ನು ಉಂಟುಮಾಡಿದ್ದು, ಕೇಂದ್ರ ಸರ್ಕಾರ ಮತ್ತು ಎನ್‌ಟಿಎ ಸಂಪೂರ್ಣವಾಗಿ ವೈಫಲ್ಯ ಕಂಡಿವೆ ಎಂಬ ಅಭಿಪ್ರಾಯ ದೇಶಾದ್ಯಂತ ಬಲವಾಗುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ವೈದ್ಯಕೀಯ ರಂಗವು ದೇಶದ ಆರೋಗ್ಯ ವ್ಯವಸ್ಥೆಯ ಬೆನ್ನೆಲುಬಾಗಿದೆ. ಇಂತಹ ಕ್ಷೇತ್ರಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯು ಭ್ರಷ್ಟಾಚಾರರಹಿತ ಮತ್ತು ವಿದ್ಯಾರ್ಥಿ ಕೇಂದ್ರಿತವಾಗಿರಬೇಕು. ಪದೇ ಪದೇ ಅಕ್ರಮಗಳ ಆರೋಪ ಎದುರಿಸುತ್ತಿರುವ ಕೇಂದ್ರೀಕೃತ ಪರೀಕ್ಷಾ ವ್ಯವಸ್ಥೆಯನ್ನು, ಈಗಾಗಲೇ ನಿಷ್ಠೆಯಿಂದ ಪರೀಕ್ಷೆ ನಡೆಸುತ್ತಿರುವ ರಾಜ್ಯಗಳ ಮೇಲೆ ಬಲವಂತವಾಗಿ ಹೇರುವುದು ಸರಿಯಲ್ಲ.

"ರಾಜ್ಯಗಳ ಶಿಕ್ಷಣ ವ್ಯವಸ್ಥೆ, ಭಾಷಾ ವೈವಿಧ್ಯತೆ, ಪಠ್ಯಕ್ರಮ ಮತ್ತು ವಿದ್ಯಾರ್ಥಿಗಳ ಸಾಮಾಜಿಕ–ಆರ್ಥಿಕ ಹಿನ್ನೆಲೆಗಳನ್ನು ಆಯಾ ರಾಜ್ಯ ಸರ್ಕಾರಗಳೇ ಉತ್ತಮವಾಗಿ ಅರ್ಥಮಾಡಿಕೊಳ್ಳಬಲ್ಲವು. ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯಗಳ ಪಾತ್ರ ಮತ್ತು ಹಕ್ಕುಗಳನ್ನು ಗೌರವಿಸುವುದು ಸಂವಿಧಾನದ ಫೆಡರಲ್ ವ್ಯವಸ್ಥೆಯ ಆತ್ಮವಾಗಿದೆ" ಎಂದಿದ್ದಾರೆ.

ಕೇಂದ್ರ ಸರ್ಕಾರವು ರಾಜ್ಯಗಳ ಹಕ್ಕುಗಳನ್ನು ಗೌರವಿಸಿ, ಏಇಂ ನಂತಹ ವಿಶ್ವಾಸಾರ್ಹ ಸಂಸ್ಥೆಗಳ ಮೂಲಕ ಸ್ವತಂತ್ರ ಪರೀಕ್ಷೆ ನಡೆಸಲು ಬಿಡಬೇಕು. ಲಕ್ಷಾಂತರ ವಿದ್ಯಾರ್ಥಿಗಳ ಕನಸುಗಳನ್ನು ಪರೀಕ್ಷಾ ಅವ್ಯವಸ್ಥೆಗಳ ಕಾರಣಕ್ಕೆ ಹಾಳುಮಾಡಲು ಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿರುವ ರಾಜ್ಯ ಸರ್ಕಾರ, ಪ್ರತಿಭಾವಂತ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ರಕ್ಷಿಸುವ, ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಯುವಜನರಿಗೆ ನ್ಯಾಯ ಒದಗಿಸುವ ಮತ್ತು ದೇಶದ ಒಕ್ಕೂಟ ವ್ಯವಸ್ಥೆಯ ಮೌಲ್ಯಗಳನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಈ ಕೂಡಲೇ ಸಕಾರಾತ್ಮಕವಾಗಿ ಸ್ಪಂದಿಸಬೇಕೆಂದು ವೈದ್ಯಕೀಯ ಶಿಕ್ಷಣ ಸಚಿವರು ಕೇಂದ್ರಕ್ಕೆ ಬಲವಾಗಿ ಆಗ್ರಹಿಸಿದ್ದಾರೆ.

# ದಸ್ತು ಬರಹಗಾರರಿಂದ ಪ್ರತಿಭಟನೆ



**ಹುಬ್ಬಳ್ಳಿ, ಮೇ 16:** ಧಾರವಾಡ ಜಿಲ್ಲಾ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಿಗೆ ಪಡೆದ (ದಸ್ತು) ಪತ್ರ ಬರಹಗಾರರ ಟ್ರಸ್ಟ್ (ರಿ) ವತಿಯಿಂದ ನಗರದಲ್ಲಿಂದು ಪ್ರತಿಭಟನೆ ನಡೆಸಲಾಯಿತು.

ಸರ್ಕಾರವು ಪತ್ರ ಬರಹಗಾರರ ಹಿತರಕ್ಷಣೆ ಮಾಡದೇ ದಸ್ತು ಬರಹಗಾರರನ್ನು ನಿರುದ್ಯೋಗ ಮಾಡುವ ಪೇಪರಲೆಸ್ ನೋಂದಣಿ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯದ ದಸ್ತು ಬರಹಗಾರ ಒಕ್ಕೂಟ ಹಾಗೂ ಧಾರವಾಡ ಜಿಲ್ಲೆಯ ಒಕ್ಕೂಟ ವಿರೋಧಿಸಿದೆ. ಡಿಜಿಟಲೀಕರಣಕ್ಕೆ ವಿರೋಧವಿಲ್ಲ, ಆದರೆ ಉದ್ಯೋಗ ನಷ್ಟ ಮಾಡಿ ತಮ್ಮನ್ನು ಬೀದಿಪಾಲು ಮಾಡುತ್ತಿದ್ದಾರೆ. ಇದಕ್ಕೆ ತಮ್ಮ ವಿರೋಧವಿದೆ ಎಂದು ದಸ್ತು ಬರಹಗಾರರು ಪೇಪರ್‌ಲೆಸ್ ನೋಂದಣಿ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ನಡೆಸಿ, ನ್ಯಾಯ ದೊರಕಿಸಿಕೊಡುವಂತೆ ಆಗ್ರಹಿಸಿ ಡಾ. ಅಂಬೇಡ್ಕರ ವೃತ್ತದಿಂದ ತಹಶೀಲ್ದಾರ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶಾಂತರಾಜ ಪಿ. ಪೋಳ, ಉಪಾಧ್ಯಕ್ಷರಾದ ವಿಜಯ ಆರ್. ಕುಲಕರ್ಣಿ, ಜಗದೀಶ ಎಸ್. ಚಿಕ್ಕಮಠ, ರಾಮಚಂದ್ರ ಎಸ್. ಸಾಳುಂಕೆ, ರಾಘವೇಂದ್ರ ಕೆ. ನರಗುಂದಕರ, ಪ್ರಧಾನ ಕಾರ್ಯದರ್ಶಿ ವಿನೋದಗೌಡ ಚ. ಪಾಟೀಲ, ಸಹಾಯಕ ಕಾರ್ಯದರ್ಶಿ ಶಂಕರ ಟಿ. ಹುಟಗಿ, ಗುರುರಾಜ ಎಮ್. ಕೊಟಬಾಗಿ ಮತ್ತಿತರರು ಉಪಸ್ಥಿತರಿದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE